ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೨೯—೧೨—೧೯೩೯.

ಸಂಪುಟ ೧೯] [ಸಂಚಿಕೆ ೩೧

THE CANARA BANKING CORPORATION LIMITED.

(Incorporated in British India)

Estd. 1906.

SEASON DEPOSITS repayable after 4 to 6 months will be accepted at all our offices, for Rs. 250/- and above @ 3½% per annum.

SAVINGS BANK ACCOUNTS opened free of charges, interest allowed; @ 2½% per anum on monthly minimum balances; operation by cheques allowed; further particulars on application.

THREE YEARS' CASH CERTIFICATES yielding interest @ 4% per annum are issued in denominations of Rs. 50/-, Rs. 100/-, Rs. 500/-, Rs. 1000/-, & Rs. 5000/-. Terms can be had from any of our offices.

FIXED DEPOSITS & SHORT TERM DEPOSITS received for varing periods; interest allowed up to 4% per annum.

CUMULATIVE DEPOSIT ACCOUNTS carrying interest @ 5% per annum, is a unique plan for systematic saving. Rules can be had from any of our offices.

For further particualars call at or write to any of our Branches.

52–53

Shorthand, Typing etc.

ಶಾರ್ಟ್‌ಹೆಂಡ್, ಟ್ಯಾಪ್‌ರ್ಯಾಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಆತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿ ಬಸ್ಸು ಸ್ಟೇಂಡಿನ ಬಳಿಯಲ್ಲಿರುವ ಆ್ಯಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutoroial School,
Mercara.

52—25

ಕೊಡಂದೇರ ಡಿ. ಮಾಚಯ್ಯ,

L.D.Sc.(COLLEGE OF DENTISTRY)
EX-SUPERVISOR. LAXMIBAI PATEL DENTAL HOSPITAL, KARACHI.

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇಷರ ಮಡಿಕೇರಿ ಬಸ್ಸ್ ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ.

ಸುಲಭ ದರ. (24) ನವೀನ ರೀತಿಯ ಚಿಕಿತ್ಸೆ.

ಕೇರಳ ಆಯುರ್ವೇದಿಕ್
ವೈದ್ಯಾಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್ ಗಳಿಗೆ ಪ್ರತ್ಯೇಕ ಔಷಧಗಳು ಬೇಕಿರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್,(ರಿಜಿಸ್ಟರ್ಡ್)
ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

52–46

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯು ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, ಮೆ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮೆ ಪಿ. ಜಿ. ಮುದ್ದಮ್ಮಯ್ಯನವರು.

ಹುದಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಜಿ. ಮಾದಮ್ಮಯ್ಯನವರು.

ಸಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.

ನಾಪೋಕ್ಲು—ಮೆ. ಬೆಳ್ಳಿಪಂಡ ಯಂ. ಪೂಣಚ್ಚನವರು. (ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮೆ. ಎಚ್. ಎಂ. ಪುಪ್ಪಣ್ಣನವರು.

ಸೂಚನೆ.—ಪ್ರಿಂಟುಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಸ್ಪ್ಲೆನೋಲ್'

ಪೂರ್ವ ಪಶ್ಚಿಮಾತ್ಯ ದೇಶಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷ ಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣ ಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:— (ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ:— (ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ:— (ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್, ಎ. ಎಂ. ಎಸ್!
(52-13) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್ಸಿ., ಎಲ್ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬೆರೈಲಿ, ಬೀವಾರ್, ಬೆನಾರೀಸ್, ಬೆಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡೆಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂಡೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೊ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಹೆಟ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

52-49

ಸ್ವಾರ್ಥೀ ಜಗತ್ತು.

(ಕ್ರೋಧ)

ಲೇಖಾಂಕ ೨.

ಲೇಖಕ:-ಗುಪ್ತ, ಮಡಿಕೇರಿ.

—::—

ಕ್ರೋಧದ ಉಗಮವಾವುದೆಂದು ತಿಳಿಯುವುದಿಲ್ಲ. ಕ್ರೋಧಕ್ಕೆ ಎದುರಾಳಿಗಳಿಲ್ಲ. ಮಹಾ ಮಹಾ ವ್ಯಕ್ತಿಗಳೂ ಕೂಡ ಕ್ರೋಧಕ್ಕೆ ತಲೆಬಾಗದೆ ಗತ್ಯಂತರವಿಲ್ಲ. ಕ್ರೋಧವು ಸ್ವತಂತ್ರಿಯೂಗಿ ಜೀವಿಸುತ್ತಿರುವದೇ ವಿನಹ ಯಾರ ಹತೋಟಿಯಲ್ಲೂ ಇಲ್ಲ. ಕಾಲಚಕ್ರದ ಉರುಳಾಟಕ್ಕೆ ಸಿಲುಕದೆ ತನ್ನ ಪ್ರತಿಷ್ಠೆ ಗೌರವಗಳನ್ನುಳಿಸಿಕೊಂಡಿರುವ ಶಕ್ತಿ ಕ್ರೋಧವಲ್ಲದೆ ಬೇರಿಲ್ಲ. ಮಹಾ ಮಹಾ ಜನಾಂಗಗಳನ್ನೇ ತನ್ನ ಪ್ರೇರಣೆಯಂತೆ ಕುಣಿಸಬಲ್ಲ ಮಹಾ ವಸ್ತುವೇ ಕ್ರೋಧ.

—::—

ಈ ಮೊದಲೇ ವಾಚಕರಿಗೆ ಪರಿಚಯ ಮಾಡಿಕೊಟ್ಟಿರುವ ಸ್ವಾರ್ಥೀ ಜಗತ್ತಿನ ಬಳಗದಲ್ಲೊಂದಾದ ಕ್ರೋಧದ ವಿಚಾರ ವಿವೇಚಿಸುವ ಮೊದಲು ಇದರ ಉಗಮವೆಲ್ಲಿ? ಎಂದು ವಿಚಾರಿಸಿದರೆ ವಿಚಾರಕ್ಕೆ ನಿಲುಕದಂತೆ ಕಂಡು ಬರುತ್ತದೆ. ಮಾನವನ ಉಗಮ ಸ್ಥಾನ ಪ್ರಾಣಿ ಸಮೂಹವೆಂದರೆ ಅಲ್ಲಿಯೂ ಈ ಕ್ರೋಧವು ಇರುವಂತೆ ಕಂಡು ಬರುತ್ತದೆ. ಕ್ರೋಧವು ಅನಾದಿಯಾಗಿದೆ, ಅರ್ವಾಚೀನವೆಂದರೂ ಸರಿಯೇ. ಹೆಚ್ಚೇಕೆ? ಈ ಭೂಮಿ ಉತ್ಪನ್ನವಾಗುವ ಮೊದಲೇ ಅಂದರೆ ಬ್ರಹ್ಮ, ವಿಷ್ಣು, ಮಹೇಶ್ವರ ಈ ಮೂವರೇ ಜಗತ್ತಿನಲ್ಲಿದ್ದ ಆ ಕಾಲದಲ್ಲೇ ಈ ಕ್ರೋಧವೆಂಬುದಿತ್ತೆಂದರೆ ಅದಕ್ಕಿಂಥಾ ಅನಾದಿಯ ವಸ್ತು ಬೇರಿಲ್ಲವೆಂಬುದು ಸ್ವಯಂವ್ಯಕ್ತ. ಅಂದಿನಿಂದಲೂ ಕ್ರೋಧವು ಒಂದು ವಿಧದ ಗೌರವಸ್ಥಾನವನ್ನೇ ಪಡೆದು ವಿರಾಜಿಸುತ್ತಿದೆ. ಇಂದಿನ ಈ ಜಗತ್ತಿನ ನಿರ್ಮಾಣವೇ ಈ ಕ್ರೋಧದಿಂದಾಯಿತೆಂದರೆ ಕ್ರೋಧದ ಮೇಲೆ ನಿಮಗೆಷ್ಟು ಮಮತೆ ಬರಲಿಕ್ಕಿಲ್ಲ? ಈ ತೋರುವ ಜಗತ್ತು ಸುಧುಕೈಟಭರೆಂಬ ರಾಕ್ಷಸರ ಮೃತದೇಹವೆಂಬುದು ಎಲ್ಲರಿಗೂ ಗೊತ್ತಲ್ಲವೇ? (ದೇವಿ ಮಹಾತ್ಮೆ ಓದಿ) ಅಂಥಾ ಧಕ್ಷಸರನ್ನು ಕೊಂದು ಜಗತ್ತಿನ ಸೃಷ್ಟಿ ಮಾಡಲು ಪ್ರೇರೇಪಿಸಿದ ಆ ಮಹಾ ಮೂರ್ತಿಯೇ ಕ್ರೋಧ. ಕ್ರೋಧವು ಆ ಕಾಲದಿಂದಲೇ ಸರ್ವಾಂತರ್ಯಾಮಿಯಾಗಿ ಸುಳ್ಳು, ಸ್ವಾರ್ಥಗಳಂತೆ ಮೆರೆಯುತ್ತಿದೆ. ಜಗನ್ನಿರ್ಮಾಪಕ ಮಹಾವಸ್ತು ಕ್ರೋಧವಾದರೂ ಜನತೆಯು ಅದರ ಬೆಲೆಯನ್ನು ತಿಳಿವಂತಿಲ್ಲ. ಇದರ ಸರ್ವವ್ಯಾಪಕತ್ವವನ್ನು ಅರಿತಿಲ್ಲ.

ಕ್ರೋಧವು ಏನು? ಅದರ ಲಕ್ಷಣಗಳೇನು? ಅದರ ಆಕಾರ ಹೇಗೆ? ಎಂಬ ಪ್ರಶ್ನೆಗಳು ವಾಚಕರಲ್ಲಿ ಮೂಡುವದು ವಾಸ್ತವ. ಕ್ರೋಧವನ್ನು ವಿವರಿಸುವದೆಂದರೆ ಜಗದ್ವ್ಯಾಪಿ ಮಹೇಶನನ್ನು ವರ್ಣಿಸಿದಂತೆ. ವರ್ಣನೆಯಲ್ಲಿ ಮಹೇಶನನ್ನು ಹೋಲುವದಾದರೂ ಮಹೇಶನನ್ನು ಕೂಡ ತನ್ನ ಅಂಕೆಯಲ್ಲಿಟ್ಟಿರುವದು ಈ ಕ್ರೋಧ. ಮುಕ್ಕಣ್ಣನೆಂದು ಕರೆಯಲ್ಪಡುವ ಮಹೇಶನ ಮೂರನೇ ಕಣ್ಣೇ ಕ್ರೋಧದ ನಿವಾಸ ಸ್ಥಾನ. ಹೆಚ್ಚೇಕೆ? ಇದರ ಸರ್ವವ್ಯಾಪಕತ್ವವನ್ನು ಈ ಬಡಲೇಖನಿ ವಿವರಿಸಲಾರದು. ಜಗನ್ನಿಯಾಮಕನಂತೆ ಕ್ರೋಧಕ್ಕೆ ಸಾಕಾರ, ನಿರಾಕಾರಗಳೆರಡೂ ಉಂಟು. ಮನಸ್ಸಿನಲ್ಲೇ ಇತರರನ್ನು ದ್ವೇಶಿಸುವಾಗ ನಿರಾಕಾರಿಯಾಗಿರುವದು. ಸಾಕಾರ ರೂಪದಲ್ಲಿ ಮಾನವನ ಮುಖದ ಮೇಲೆ ಕೆಂಪು ಛಾಯೆಯಿಂದಲೂ, ಕಣ್ಣುಗಳಲ್ಲಿ ಬೆಂಕಿಯ ಕಿಡಿಗಳನ್ನು ಕಾರುತ್ತಲೂ ವಿರಾಜಿಸುವದು. ಮಾನವನ ಮೇಲೆ ತನ್ನ ಅಧಿಕಾರವನ್ನಿಟ್ಟು ತಾನಂದಂತೆ ಆತನನ್ನು ಈ ಕ್ರೋಧವು ಕುಣಿಸುವದು. ಮಾನವನಲ್ಲಿ ಮೈದೋರಿ ಬಂದು ಮಹಾ ಮಹಾ ಕಾರ್ಯಗಳನ್ನು ಮಾಡಿಸುವದು. ಮಾನವನು, ಸಾತ್ವಿಕ, ಧರ್ಮಿಷ್ಟನಿದ್ದರೂ ಆತನಲ್ಲಿ ಕ್ರೋಧದ ಅವತಾರವಾಯಿತೆಂದರೆ ಆಗು ಹೋಗುಗಳನ್ನು ಮರೆಸುವದು, ದಯಾದಾಕ್ಷಿಣ್ಯಗಳನ್ನು ಹೊಲಗಿಸುವದು, ಪಾಪಪುಣ್ಯಗಳನ್ನು ಲಕ್ಷಿಸದು. ಆ ರೀತಿ ತನ್ನ ನಿರ್ದಿಷ್ಟ ಕಾರ್ಯಕ್ರಮವನ್ನು ಮಾಡಿಸಿಯೇ ಬಿಡುವದು. ಮಾನವನಲ್ಲಿ ಮೂರ್ತಿಮತ್ತಾಗಿರುವ ಈ ಸ್ವಾರ್ಥೀ ಜಗತ್ತಿನ ಒಳಗಗಳನ್ನೆಲ್ಲಾ ಹಿಂದೆ ಹಾಕಿ ಈ ಕ್ರೋಧವು ತನ್ನ ಕೈವಾಡವನ್ನು ನಡೆಸಿಯೇ ಬಿಡುವದು. ಕ್ರೋಧವು ವ್ಯಕ್ತಿಯನ್ನು ತನ್ನ ಹತೋಟಿಯಲ್ಲಿಟ್ಟಿರುವ ಯಜಮಾನನೇ ಅಲ್ಲ. ಭಾರತದ ಮುಖಂಡತ್ವವನ್ನು ಮಹಾತ್ಮಗಾಂಧೀಯವರು ವಹಿಸಿ ಜನಾಂಗವನ್ನು ಮುನ್ನಡೆಸುತ್ತಿರುವ ರೀತಿ ಕ್ರೋಧವಾದರೂ ಮುಖಂಡನಾಗಿ ವರ್ತಿಸಬಲ್ಲುದು. ವೈಶಿಷ್ಟ್ಯವೆಂದರೆ ಅದು ಏಕ ಕಾಲದಲ್ಲಿ ಅನೇಕ ಜನಾಂಗದ ಮುಖಂಡನೂ ಆಗಬಲ್ಲುದು. ಇಂದು ಹಿಟ್ಲರನು ಯುದ್ಧ ಹೂಡಿರುವದಾಗಲೀ, ರಷ್ಯಾವು ಫಿನ್‌ಲೇಂಡಿನ ಕತ್ತು ಹಿಸುಕುತ್ತಿರುವದಾಗಲೀ, ಯೂ ಜಪಾನಿಯರು ಚೈನೀಯರ ಮೇಲೆ ಮುಡುತ್ತಿರುವ ಹಾವಳಿಯೂಗಲೀ ನಮ್ಮ ಮಹಾ ಮುಖಂಡ ಕ್ರೋಧನ ಪ್ರೇರಣೆಯಿಂದಲೇ. ವ್ಯಕ್ತಿ ವ್ಯಕ್ತಿಗಳೊಳಗಿನ ಘರ್ಷಣೆ, ಸಂಘ ಸಂಸ್ಥೆಗಳೊಳಗಿನ ಅನಾಚಾರ ಇವಾವದರೂ ನಡೆಯುವದು ಈ ಕ್ರೋಧದ ನೇತೃತ್ವದಿಂದಲೇ.

ಕ್ರೋಧವು ಪರಮಾತ್ಮನು ಅವತಾರವೆತ್ತಿದಂತೆ ಹಲವು ರೂಪುಗಳನ್ನು ತಳೆಯುವದುಂಟು. ಪ್ರಾಮುಖ್ಯವಾಗಿ ಇದನ್ನು ಮೂರು ವಿಧವಾಗಿ ವಿಂಗಡಿಸಬಹುದು. (1) ಅಂತಕ್ರೋಧ. (2) ಬಹಿಕ್ರೋಧ. (3) ಕ್ರೋಧಾಕ್ರೋಧ, ಇದರ ಒಂದನೇ ಅವತಾರವನ್ನು ವಿವರಿಸುವದೆಂದರೆ ಹೆಸರಿನಲ್ಲೇ ಸೂಚಿತವಾದಂತೆ ಅದು ಪ್ರತ್ಯಕ್ಷ ನಡೆಯದು. ಕ್ರೋಧವೆಂಬುದು ಎಲ್ಲರಲ್ಲಿಯೂ ಇರುವ ಸರ್ವಾಂತರ್ಯಾಮಿಯೊಬ್ಬರೂ ಸಮುತ್ಪಾದಿಯಲ್ಲ. ಒಬ್ಬನಲ್ಲಿ ಹೆಚ್ಚಿನ ಪರಿಮಾಣದಲ್ಲೂ, ಮತ್ತೊಬ್ಬನಲ್ಲಿ ಅಲ್ಪ ಪರಿಮಾಣದಲ್ಲೂ ಅದು ಕಾಣಿಸಿಕೊಳ್ಳುವದು. ಅದೃಷ್ಟವಶಾತ್ ಬಹುಪರಿಣಾಮದಲ್ಲಿರುವವನ ಮೇಲೆ ಅಲ್ಪ ಪರಿಮಾಣದವನ ಕ್ರೋಧ ಬಂದರೆ ಅದು ಅಂತಕ್ರೋಧ. ಪ್ರತ್ಯಕ್ಷ ಆತನನ್ನು ಎದುರಿಸುವದು ಅಸಾಧ್ಯವಾದರೂ ಮನಸಿನೊಳಗೇ ನಿಶೇಧಿಸುವದು, ಹೆರವರೊಡನೆ ದೂಷಿಸುವದು, ಮರೆಯಲ್ಲಿ ನಿಂತು ಪತ್ರಿಕೆಗಳಲ್ಲಿ ಠೀಕಿಸುವದು ಇನೇ ಅಂತಕ್ರೋಧದ ಲೀಲಾಜಾಲಗಳು. ಉದಾಹರಣೆ ಬೇಕಿದ್ದರೆ ಇಲ್ಲಿಯ ರಾಜಕೀಯ ಪಟುಗಳೆಂದುಕೊಂಡು ಮೆರೆಯುವವರನ್ನು ನಿರೀಕ್ಷಿಸಿ. ಕ್ರೋಧವು ಇಬ್ಬರಲ್ಲಿಯೂ ಒಂದೆ ಪರಿಮಾಣದಲ್ಲಿದ್ದು ಅವರೊಳಗೆ ಘರ್ಷಣೆ ಬಂದರೆ ಅದು ಬಹಿಕ್ರೋಧ. ಇಬ್ಬರೂ ಸೋಲುವಂತಿಲ್ಲ. ಮೂರನೆಯದಾದ ಕ್ರೋಧಾಕ್ರೋಧವು ವಿಶಿಷ್ಟ ತರದ್ದು. 'ಬಡವನ ಸಿಟ್ಟು ದವಡೆಗೆ ಮೂಲ' ಎಂಬಂತೆ ಈ ಅವತಾರದಲ್ಲಿ ಮೈದೋರಿದವನಿಗೆ ಪ್ರಸಾದ ಮೂರೆಯುವಷ್ಟೂ ಉಂಟು. ಇದಾವದರೂ ನಮ್ಮ ಸಮೂಜದಲ್ಲಿ ಅಪರೂಪವಲ್ಲ. ತಂದೆ ಮಕ್ಕಳ ಸಿಟ್ಟನ್ನೇ ಇದಕ್ಕೆ ನಿದರ್ಶನ ಕೊಡಬಹುದು.

ಕ್ರೋಧದ ಪ್ರತಾಪವನ್ನು ಒಂದಿಷ್ಟು ಪರ್ಣಿಸಿದರೆ ವಾಚಕರಿಗೆ ಅದರ ಮಹತ್ವ ಸ್ವಲ್ಪ ತಿಳಿದೀತು. ಇಡೀಲ್ಲಾ ನಿನುಗೆ ತಿಳಿದಿರುವದಾದರೂ ಪುನಹ ನಾನು ಹೇಳುವದರಿಂದ ಕುಪಿತರಾಗಿ ಕ್ರೋಧದ ಪ್ರತಾಪವನ್ನುನನ್ನಮೇಲೆ ಮೂಡಬೇಡಿ. ಕ್ರೋಧವು ಹುಟ್ಟಿದಾರಭ್ಯ ಯಾರ ಹತೋಟಿಗೂ ಬಂದಿಲ್ಲ. ಅಂದಿನಿಂವ ಇಂದಿನ ವರೆಗೂ ಅದು ಸ್ವತಂತ್ರಿಯೇ. ಮಹಾ ದೈವೀ ಪುರುಷನೇ ಇರಲಿ, ಜಟಾಜೂಟ ಕಮಂಡಲ ಶೋಭಿತ ಯತೀಶ್ವರನೇ ಇರಲಿ, ಜಗದ್ವಾಪಾರವನ್ನು ತೊರೆದು ಕಾಮಿನಿ ಕಾಂಚನಗಳನ್ನು ಮರೆತು ಘೋರ ತಪಸು ಮಾಡುವ ಮಹಾಮಹಿಮನೇ ಇರಲಿ; ಅಲ್ಲ; ಜನತೆಯಿಂದ ಆದರಾತಿಥ್ಯವನ್ನು ಪಡೆದು ಜನಾದರಣೆಯನ್ನು ಹೊಂದಿ ಜನರಿಗೆ ತಿಲಕಪ್ರಾಯನಾಗಿರುವ ಮುಖಂಡನೇ ಆಗಲಿ; ನಮ್ಮ ಮಹಾಮಹಿಮ ಕ್ರೋಧವು ಆತನಲ್ಲಿ ಮೈದೋರಿದನೆಂದರೆ ಅಂಥಾ ಮಹಾವ್ಯಕ್ತಿಯ ಕೃತಿಗಳನ್ನೇ ಬದಲಾಯಿಸಬಲ್ಲುದು. ತಪಸ್ವಿಗಳ ತಪಭಂಗ ಮಾಡಬಲ್ಲುದು. ಮಹಾರಥ ಅತಿರಥರನ್ನೇ ದಿಕ್ಕು ತೋರದಂತೆ ಮಾಡುವದು. ನಮ್ಮ ಕ್ರೋಧದ ಮಹತ್ವವು ಅಗಾಧವಾದು. ಆಷ್ಟೇಯ ಕೀರ್ತಿಪ್ರತಾಪಗಳಿಂದ ತುಂಬಿ ತುಳುಕುವಂತಹದು. ಈ ಕ್ರೋಧನಿಂದಾಗಿಯೇ ಮನ್ಮಥನು ಭಸ್ಮವಾದನು. ವಿಶ್ವಾಮಿತ್ರನು ತಪಭಂಗ ಮಾಡಿಕೊಂಡನು. ಕೌರವನು ವಿನಾಶ ಹೊಂದಿದನು. ಇನ್ನು ಅನೇಕರು ಅನೇಕ ವಿಧದಲ್ಲಿ ತೊಂದರೆ ಪಟ್ಟರು. ಇದೆಲ್ಲಾ ಪುರಾಣದ ವಿಚಾರ. ಇಂದಿನ ವಿಚಾರವಲೋಕನ ಮಾಡಿದರೆ ಶ್ರೀ ಸುಬಾಶ ಬಾಬುಗಳ ಅನಾಸಕ್ತಿಗೂ, ಜಿನ್ನಾರವರ ಅಪಪ್ರಲಾಪಕ್ಕೂ ಈ ಕ್ರೋಧವೇ ಕಾರಣ. ಸುಬಾಶ ಬಾಬುಗಳು ರಾಷ್ಟ್ರಪತೀತ್ವದ ಗದ್ದುಗೆಗೆ ಚುನಾಯಿಸಲ್ಪಟ್ಟ ಕಾಲಕ್ಕೆ ಮಹಾತ್ಮರವರು ಹೊರಡಿಸಿದ ನನ್ನ ಸೋಲು ಎಂಬ ಹೇಳಿಕೆಯೂ ಕ್ರೋಧದ ಚಿಹ್ನೆಯೇ. ಹೀಗೆ ಒಂದು ಅಲ್ಪ ಜೀವಿಯಿಂದ ಹಿಡಿದು ಮಹಾಮಹಾ ಮೇಧಾವಿಗಳನ್ನು ಸಹ ತನ್ನ ಹಿಡಿತದಲ್ಲಿಟ್ಟಿರುವ ಕ್ರೋಧದ ಚರಿತ್ರೆ ವರ್ಣನಾತೀತವಾಗಿದೆ.

ಕ್ರೋಧವನ್ನು ಜಯಿಸಿದವರಾರಾದರೂ ಇದ್ದಾರೆಯೇ ಎಂದು ಪುರಾಣದ ಪುಠಗಳನ್ನಾಗಲೀ ಯಾ ಚರಿತ್ರೆಯನ್ನಾಗಲೀ ಅವಲೋಕಿಸಿದರೆ ಎಲ್ಲರೂ ಈ ಕ್ರೋಧದಿಂದ ಬಂಧಿತರಾದ್ದೇ ಕಂಡು ಬರುವದು. ಕ್ರೋಧದ ಪ್ರಾಬಲ್ಯ, ಪರಾಕ್ರಮ ಇಂಥಾದಿದ್ದರೂ ಕ್ರೋಧದ ಪ್ರತಿರೂಪವಾದ ಹಿಂಸೆಯನ್ನು ಬಗ್ಗು ಬಡಿದು ಕ್ರೋಧದ ಅವತಾರವನ್ನೇ ಮುಗಿಸಿಬಿಡಬೇಕೆಂದು ಮಹಾತ್ಮರವರ ನೇತೃತ್ವದಲ್ಲಿ ಪ್ರಚಂಡ ಚಳವಳವನ್ನು ಸತ್ಯಾಗ್ರಹಿಗಳೆಂಬ ತಂಡವು ಹೂಡಿತು. ಸೆರೆಮನೆಗಳನ್ನು ಈ ತಂಡವು ಸೇರಿತು. ಹಿಂಸೆಯನ್ನು ಬೇರುಸಮೇತ ಕಿತ್ತೆಸೆಯಲು ಈ ತಂಡವು ಕಾರಗೃಹವು ಕೃಷ್ಣನ ಜನ್ಮಸ್ಥಾನ, ಸ್ವಾತಂತ್ರ್ಯದ ಉಗಮಸ್ಥಾನವೆಂದು ಅವುಗಳನ್ನು ಹೊಕ್ಕಿ ಹಿಂಸೆಯ ಹುಟ್ಟಡಗಿಸಲು ಪ್ರಯತ್ನಿಸಿದರು. ಆದರೆ ಯಶಸ್ವಿಗಳಾಗಲಿಲ್ಲ. ಕ್ರೋಧವು ಸೋಲಲಿಲ್ಲ. ಸ್ವಯಂಸೇವಕರು ಸೆರೆಮನೆಯಿಂದ ಹಿಂದಿರುಗಬೇಕಾಯಿತು. ತನ್ನ ಮೇಲೆ ಹಗೆತನ ಬೆಳೆಸಿದ ಸತ್ಯಾಗ್ರಹಿಗಳನ್ನು ಕ್ರೋಧವು ಸುಮ್ಮನೆ ಬಿಟ್ಟೀತೇ? ತನ್ನ ಬಳಗವಲ್ಲೊಬ್ಬನಾದ ಸ್ವಾರ್ಥವನ್ನು ಈ ಸತ್ಯಾಗ್ರಹಿಗಳ ತಂಡಕ್ಕೆ ಛೂ ಬಿಟ್ಟಿತು. ಅವೆಲ್ಲೋ ಇಂದು ಈ ಸ್ವಾರ್ಥದ ರೂಪುಗಳು ಸಹಸ್ರಾರ್ಜುನರಂತೆ ಸಾವಿರಾರು ರೀತಿಯಲ್ಲಿ ಕಾಣಬರುತ್ತಿವೆ. ಒಂದೆಡೆ ಕ್ರೋಧವೂ ತನ್ನ ಹಾವಳಿಯನ್ನು ನಡೆಸುತ್ತಿದೆ. ಹೀಗಾಗಿ ಸ್ವಯಂಸೇವಕ ದಳವು ಸೋತು ಸುಣ್ಣಾಗಿದೆ. ಆ ಸ್ವಾರ್ಥದ ಮಹಿಮೆಯಿಂದ ಹಗಲು ರಾತ್ರಿಯಾಗಿಯೂ, ರಾತ್ರಿ ಹಗಲಾಗಿಯೂ, ಸತ್ಯ ಅಸತ್ಯವಾಗಿಯೂ ಕಾಣತೊಡಗಿದೆ. ಕ್ರೋಧವು ಹೀಗೆ ವಿಜಯಶಾಲಿಯಾಗಿ ತನ್ನ ಪತಾಕೆಯನ್ನು ಎಂದಿನಂತೆ ಭಾರತದಲ್ಲಿ ಯಾಕೆ ಇಡೀ ಜಗತ್ತಿನಲ್ಲೇ ಹಾರಿಸಿದೆ. ಹೀಗೆ ಅನಾದಿಯಿಂದಲೂ ತನ್ನ ಪ್ರತಿಷ್ಠೆಯನ್ನು ಯಾವ ತೊಡಕೂ ಇಲ್ಲದೆ ನಡೆಸುತ್ತಾ ಕ್ರೋಧವು ವಿಜಯಿಯಾಗಿ ಮೆರೆಯುತ್ತಿದೆ. ಆದ್ದರಿಂದ ಜಗತ್ತಿಗೆ ಮೂಲಕಾರಣವಾಗಿ, ಸ್ವತಂತ್ರಿಯಾಗಿ, ನಾನಾ ಅವತಾರಗಳನ್ನೆತ್ತಿ ಅಚ್ಚಳಿಯದೆ ತನ್ನ ಪ್ರತಾಪವನ್ನು ಎಂದಿನಂತೆ ಯಾಕೆ ಸ್ವಲ್ಪ ಹೆಚ್ಚಾಗಿಯೇ ನಡೆಸುತ್ತಿರುವ ಕ್ರೋಧವು ಪೂಜಾರ್ಹವಾದ್ದು. ಕಾಲ ಚಕ್ರದ ಉರುಳಾಟದಲ್ಲಿ ಮಹಾ ಮಹಾ ಮನೆತನಗಳೂ, ಚಕ್ರವರ್ತಿಗಳೂ, ರಾಜ್ಯಗಳೂ ವಿನಾಶವನ್ನು ಹೊಂದಿದವು. ಆದರೆ ಅನಾದಿಯಿಂದಲೂ ತನ್ನ ಪ್ರತಾಪವನ್ನು ಇನ್ನೂ ಇನ್ನು ಹೆಚ್ಚಿಸಿಕೊಂಡು ಬರುತ್ತಿರುವ ಕ್ರೋಧ, ನೀನೇ ಧನ್ಯ! ನಿನ್ನ ಸ್ಮರಣೆ ಮಾಡಿದ ನಾನೂ, ಲೇಖನವನ್ನೋದುವ ವಾಚಕರೂ ಧನ್ಯರೇ ಸರಿ!!

———

ಕೊಡಗು

ಡಿಸಂಬರ್ ತಾರೀಕು ೨೯ನೇ ಶುಕ್ರವಾರ ೧೯೨೮.

ಕಾಂಗ್ರೆಸ್ ವರ್ಕಿಂಗ್ ಕಮಿಟಿ.

ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ್ ಸಭೆಯು ತಾ. 19 ರಿಂದ 23 ರ ವರೆಗೆ ವರ್ಧಾದಲ್ಲಿ ಕೂಡಿತ್ತು. ಭಾರತೀಯ ರಾಜಕೀಯ ಪರಿಸ್ಥಿತಿಯನ್ನು ದೀರ್ಘವಾಗಿ ಪರ್ಯಾಲೋಚಿಸಿ ಕಾರ್ಯಕಾರಿ ಮಂಡಳಿಯು ಒಂದು ನಿರ್ಧಾರಕ್ಕೆ ಬಂದಿದೆ. ಭಾರತ ಸ್ವಾತಂತ್ರ್ಯಕ್ಕೆ ಇರುವ ಒಂದೇ ತೊಡಕೆಂದು ಬ್ರಿಟಿಷರು ಅನ್ನುತ್ತಿರುವ ಕೋಮುವಾರು ಸಮಸ್ಯಾ ಪರಿಹಾರಕ್ಕೆ ಕಾನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯ ಏರ್ಪಾಟೇ ಸುಗಮಮಾರ್ಗವೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಮತ್ತೊಮ್ಮೆ ಸಾರಿ ಹೇಳಿದೆ. ಪರಕೀಯರ ಆಡಳಿತವು ಪೂರ್ಣ ನಿಂತರೇನೇ ಕೋಮುವಾರು ಐಕ್ಯತೆ ಸಾಧ್ಯವಾಗುವದೆಂದು ಸ್ಪಷ್ಟವಾಗಿ ಹೇಳಿ ಬಿಟ್ಟಿದೆ. ಬ್ರಿಟಿಷ್ ಸರಕಾರವು ಭಾರತೀಯರ ಈ ಕೋರಿಕೆಯನ್ನು ಸಲ್ಲಿಸಲು ನಿರಾಕರಿಸಿದರೆ ಶಾಸನ ನಿರೋಧ ಚಳವಳಿಯನ್ನು ನಡೆಸಬೇಕಾಗುತ್ತದೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಸೂಚಿಸಿದೆ. ಇದರಿಂದ ಕಾಂಗ್ರೆಸು ಶಾಸನ ನಿರೋಧ ಕಾರ್ಯಕ್ರಮಕ್ಕೆ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಲು ನಿರ್ಧರಿಸಿದೆ ಎಂಬುದು ಖಚಿತವಾಗುತ್ತಿದೆ. ಕಾಂಗ್ರೆಸಿನವರು ರಚನಾತ್ಮಕ ಕಾರ್ಯಕ್ರಮವನ್ನು ಮುಂದೊತ್ತಿ, ಸಂಸ್ಥೆಯನ್ನು ಮತ್ತಷ್ಟೂ ಬಲಪಡಿಸಿ ಐಕ್ಯಮತ್ಯವನ್ನು ಸಾಧಿಸಬೇಕೆಂದು ಸೂಚಿಸಿರುವ ವರ್ಕಿಂಗ್ ಕಮಿಟಿಯ ಧೋರಣೆಯೇ ಇದಕ್ಕೆ ನಿದರ್ಶನ. ಇದನ್ನು ನೋಡುವಾಗ ಬ್ರಿಟಿಷರು ಕಾನ್‌ಸ್ಟಿಟ್ಯುವೆಂಟ್ ಎಸೆಂಬ್ಲಿ ತತ್ವವನ್ನು ಒಪ್ಪಿ ವರ್ತಿಸದ ವಿನಹ ಕೋಮುವಾರು ಸಮಸ್ಯಾಪರಿಹಾರವಾಗಲಾರದೆಂದೂ, ಭಾರತದಲ್ಲಿ ಶಾಂತತೆಯು ನೆಲಸದೆಂದೂ ಬ್ರಿಟಿಷರಿಗೆ ಎಚ್ಚರಿಕೆ ಕೊಟ್ಟಂತೆ ಭಾಸವಾಗುತ್ತದೆ.

ಲಾರ್ಡ್ ಜೆಟ್‌ಲ್ಯಾಂಡರವರು ಕಳೆದ ತಮ್ಮದೊಂದು ಭಾಷಣದಲ್ಲಿ 'ಕೋಮುವಾರು ಭಿನ್ನತೆಗಳೇ ಭಾರತದ ಕೋರಿಕೆಯನ್ನು ನಾವು ಈಡೇರಿಸಲು ಅಡ್ಡಿಯಾಗಿರುವದು; ಮೊದಲು ಮುಸ್ಲಿಂಲೀಗಿನೊಡನೆ ಒಪ್ಪಂದ ಮಾಡಿಕೊಂಡು ನಂತರ ನಮ್ಮೊಡನೆ ವ್ಯವಹಾರಕ್ಕೆ ಬನ್ನಿ' ಎಂದು ಕಂಠೋಕ್ತವಾಗಿ ನುಡಿದಿದ್ದರು ವರ್ಕಿಂಗ್ ಕಮಿಟಿಯು ಇದನ್ನು ನಿಶೇಧಿಸಿದೆ. ಉದ್ದಿಶ್ಯಪೂರ್ವಕವಾಗಿಯೋ ಯಾ ಉದ್ದೇಶವಿಲ್ಲದೆಯೋ ಮುಸ್ಲಿಂಲೀಗನ್ನು ಹೀಗೆ ಎತ್ತಿ ಕಟ್ಟಿ ಕೋಮುವಾರು ಭಿನ್ನತೆಗೆ ಇನ್ನೂ ಕಳೆಕೊಡಲು ಯತ್ನಿಸುತ್ತಿರುವ ಬ್ರಿಟಿಷರ ಧೋರಣೆಯನ್ನು ಖಂಡಿಸಿದೆ. ಪ್ರತಿಯೊಬ್ಬ ಭಾರತೀಯನೂ ತಾನು ಮೊದಲು ಭಾರತೀಯ, ನಂತರ ಹಿಂದೂ ಮುಸಲ್ಮಾನ ಎಂದು ಮುಂತಾಗಿ ಭಾವಿಸುವಂತಾಗಬೇಕೆಂದು ಕಾಂಗ್ರೆಸು ಒತ್ತಿ ಹೇಳಿದೆ. ಅಗತ್ಯವಿದ್ದರೆ ಎಲ್ಲಾ ಕೋಮುಗಳಿಗೂ ಪ್ರತ್ಯೇಕ ಚುನಾವಣಾ ಪದ್ಧತಿಯ ಮೂಲಕ ಪ್ರಾತಿನಿಧ್ಯವನ್ನೊದಗಿಸಿಕೊಟ್ಟು ಕಾನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯನ್ನೇರ್ಪಡಿಸಿ ಏನಾದರೂ ವ್ಯಾಜ್ಯಗಳೊದಗಿದರೆ ಅವುಗಳನ್ನು ಪರಿಹರಿಸಲು ನ್ಯಾಯ ಪಕ್ಷಪಾತದ ನ್ಯಾಯಸಮಿತಿಯ ತೀರ್ಮಾನವನ್ನು ಪಡೆಯಬಹುದೆಂದು ಕಾಂಗ್ರೆಸು ಪುನಹ ಸ್ಪಷ್ಟೀಕರಿಸಿದೆ.

ಯಥಾವಿಧಿ ಕಾಂಗ್ರೆಸು ಆಚರಿಸುತ್ತಾ ಬಂದಿರುವ ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ ವರ್ಕಿಂಗ್ ಕಮಿಟಿಯು ಕೆಲವು ನಿರ್ಣಯಗಳನ್ನು ಮಾಡಿದೆ. ಇಂದಿನ ಪರಿಸ್ಥಿತಿಯಲ್ಲಿ ಸ್ವಾತಂತ್ರ್ಯದಿನಾಚರಣೆಗೆ ವಿಶೇಷ ಮಹತ್ವವಿದೆಯೆಂದೂ, ದಿನಾಚರಣೆಯು ನಮ್ಮ ಸ್ವಾತಂತ್ರ್ಯ ಮನೋಭಾವವನ್ನು ಹೊರಸೂಸುವಂತಿರಬೇಕೆಂದೂ ಸಾರಿದೆ. ಈ ನಿರ್ಣಯವು ರಚನಾತ್ಮಕ ಕಾರ್ಯಕ್ರಮಗಳ ಮಹತ್ವವನ್ನು ಪ್ರಸ್ತಾಪಿಸಿದೆ. ಭಾರತದ ಏಳು ಲಕ್ಷ ಹಳ್ಳಿಗಳ ಉದ್ಧಾರಕ್ಕೆ ಖಾದಿಯೇ ಪರಮೌಷಧವೆಂದು ಸೂಚಿಸಿದೆ. ಅಲ್ಲದೆ 'ಭಾರತದ ಸ್ವಾತಂತ್ರ್ಯ ಸಾಧನೆಗಾಗಿ ಹೋರಾಡಲು ಕಾಂಗ್ರೆಸಿನ ಆವ್ವಾನವು ನಮಗೆ ಬಂದೊಡನೆಯೇ ಹೋರಾಟಕ್ಕಾಗಿ ನುನ್ನುಗ್ಗುವದಕ್ಕೆ ಸಿದ್ಧರಾಗಿರುತ್ತೇವೆ. ವಿವಿಧ ಕೋಮುಗಳೊಡನೆ ವರ್ತಿಸುವಾಗ ನಾವು ಪರಸ್ಪರ ಸೌಹಾರ್ದದಿಂದ ನಡಕೊಳ್ಳುತ್ತೇವೆ. ನಮ್ಮ ಮತಗಳು ಬೇರೆ ಬೇರೆಯಾದರೂ ನಾವೆಲ್ಲಾ ಒಂದೇ ತಾಯಿಯ ಮಕ್ಕಳಂತೆ ವರ್ತಿಸುತ್ತೇವೆ' ಎಂಬ ಮಹತ್ವಪೂರ್ಣವಾದ ಠರಾವನ್ನು ಅಂಗೀಕರಿಸಿರುವದು. ಆದ್ದರಿಂದ ಜನವರಿ 26 ರಲ್ಲಿ ಆಚರಿಸಲ್ಪಡುವ ಸ್ವಾತಂತ್ರ್ಯ ದಿನಾಚರಣೆಯು ಈ ಸಾರಿ ಗತವರ್ಷದವುಗಳಿಗಿಂಧಾ ಮಹತ್ವಪೂರ್ಣವಾದದ್ದಿರುವದು. ನಮ್ಮ ಅಭಿಪ್ರಾಯಗಳನ್ನು ಅಂದು ವ್ಯಕ್ತಪಡಿಸಿ ಮುಂದಿನ ಕಾರ್ಯಕ್ರಮವನ್ನು ಕೈಕೊಳ್ಳುವ ಬಗ್ಗೆ ಕಾಂಗ್ರೆಸಿನ ಸೂತ್ರಧಾರಿಗಳಿಗೆ ಹುರುಪನ್ನೀಯುವ ಕಾರ್ಯವಾದರೂ ನಮ್ಮ ಪಾಲಿಗೆ ಬಿದ್ದಿದೆ. ದೇಶವು ತೀವ್ರ ಚಳವಳಿಕ್ಕೆ ಸಿದ್ದವಿಲ್ಲ. ದೇಶದಲ್ಲಿ ಶಿಸ್ತಿಲ್ಲ. ಜನತೆಯಲ್ಲಿ ಐಕ್ಯತೆಯಿಲ್ಲ ಎಂಬ ಮುಖಂಡರ ಸಂದೇಹಗಳನ್ನು ನಿವಾರಿಸಲು ನಮಗೆ ದೊರೆತಿರುವ ಸುಸಮಯವಾದರೂ ಅಂದೇ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಮುಂದಿನ ಆಡಳಿತೆಯ ಬಗ್ಗೆ ಬ್ರಿಟಿಷ್ ಸರಕಾರವು ಹೇಗೆ ವರ್ತಿಸಬೇಕೆಂಬುದನ್ನು ಸೂಚಿಸಿದೆ. ಈ ಮಧ್ಯೆ ದೇಶೀಯರಾದರೂ ಹೇಗೆ ವರ್ತಿಸಬೇಕೆಂಬುದನ್ನು ಶ್ರುತಪಡಿಸಿದೆ. ಬ್ರಿಟಿಷರು ಕಾಂಗ್ರೆಸಿನ ಎಚ್ಚರಿಕೆಯನ್ನು ನಿರಾಕರಿಸಿ ತಮ್ಮ ನಿಶ್ಚಿತ ಪಥವಲ್ಲೇ ಕ್ರಮಿಸುವದಾದರೆ ದೇಶದಲ್ಲಿ ಅಂದೋಲನವು ಉಂಟಾಗದಿರದೆಂಬುದು ಖಚಿತವಾಗಿದೆ. ದೇಶೀಯರಾದರೂ ಇಂಥಾ ಸಂದರ್ಭದಲ್ಲಿ ತಮ್ಮ ನಾಡಿನ ಕಲ್ಯಾಣವನ್ನು ಬಯಸಿ ವರ್ತಿಸಬೇಕೆಂದಿದೆ. ಆದ್ದರಿಂದ ಬ್ರಿಟಿಷರು ಈ ಸೂಚನೆಗಳಿಂದ ಎಚ್ಚರಗೊಂಡು ಮುಂದೆ ಬರಬಹುದಾದ ಗೊಂದಲವನ್ನು ಪರಿಹರಿಸುವದು ಆವ್ಯಕ್ತರ್ವ್ಯ. ಈ ಮಧ್ಯೆ ದೇಶೀಯರಾದರೂ ಕಾಂಗ್ರೆಸಿನ ಕರೆಯಂತೆ ವರ್ತಿಸಲು ಸಿದ್ದರಾಗಿರಬೇಕೆಂಬುದೇ ನಮ್ಮ ಸದಾಶಯ.

ಬ್ರಿಟಿಷ್ ಸಾರ್ವಭೌಮರ ಸಂದೇಶ.

'ಜಗತ್ತಿನಲ್ಲಿ ಯಾವದನ್ನು ಕೆಡುಕೆಂದು ಪರಿಭಾವಿಸಲಾಗುತ್ತಿದೆಯೋ ಅದನ್ನೆದುರಿಸಿ ನಾವು ಯುದ್ಧ ಮಾಡುತಿದ್ದೇವೆಂಬ ಭಾವನೆಯು ನಮ್ಮ ಹೃದಯಗಳಲ್ಲಿ ವೃಥವಾಗಿದೆ. ಈ ನಂಬಿಕೆಯೇ ನಮಗೆ ಬೆಂಬಲ ಕೊಡುತ್ತಿರುವದು. ಇದೇ ನಮ್ಮನ್ನು ವಿಜಯ ಮಾರ್ಗದಲ್ಲಿ ಕರೆದೊಯ್ಯುವದು. ಮುಂದೆ ಸಂಭವಿಸಬಹುದಾದುದನ್ನೆಲ್ಲಾ ನಾವು ನಿರೀಕ್ಷಿಸುತ್ತಾ ಅದಕ್ಕೆ ಸಿದ್ದರಾಗಿದ್ದೇವೆ. ಕಳೆದ ನಾಲ್ಕು ತಿಂಗಳಿಂದಲೂ ವಿಶೇಷ ಭಯಂಕರವಾದ ಮತ್ತು ನಿಷ್ಕರುಣವಾದ ರೀತಿಯಲ್ಲಿ ಶತ್ರುವು ಎದುರಿಗೆ ನಿಂತಿದ್ದರೂ ನಮ್ಮ ಪಡೆಯವರು ಕುಗ್ಗದೆ ಹೋರಾಡುತ್ತಿದ್ದಾರೆ. ನಮ್ಮ ನೌಕಾಸೈನ್ಯ ವಾಯುಬಲ, ಮತ್ತು ನೆಲಸೈನ್ಯ ಇವುಗಳಿಗೆಲ್ಲಾ ನನ್ನ ಈ ರೀತಿಯ ಸಂದೇಶವನ್ನು ಕೊಡುತ್ತೇನೆ. ನಮ್ಮ ಸೈನ್ಯಗಳೆಲ್ಲವೂ ಅಮಿತ ಪರಾಕ್ರಮದಿಂದ ಯುದ್ಧ ಮಾಡುತ್ತಿವೆ. ನೌಕಾ ಹಾಗೂ ವಾಯುಬಲವು ನಮ್ಮ ಎರಡು ಕಣ್ಣುಗಳಂತಿವೆ. ನಮ್ಮ ನೆಲಸೈನ್ಯವಾದರೂ ತಮ್ಮ ಪೀಳಿಗೆಗೆ ಯೋಗ್ಯವಾದ ಕಾರ್ಯಗಳನ್ನು ಮಾಡುತ್ತಿರುವರೆಂಬುದರಲ್ಲಿ ಸಂಶಯವಿಲ್ಲ. ನಮ್ಮ ಈ ಸೈನ್ಯಪಡೆಗಳು ತಮ್ಮ ಹಿಂದಿನ ಕೀರ್ತಿಯ ಕಳಸನ್ನು ಪಾಲಿಸಿಕೊಂಡು ಬರುತ್ತಿದ್ದಾರೆ. ಭೂ, ಗಗನ, ಸಮುದ್ರ ಬಲಗಳಲ್ಲಿ ಸೇರಿ ಹೋರಾಡಿ ದೇಶಸೇವೆ ಮಾಡಬೇಕೆಂಬುವವರಿಗೆಲ್ಲರಿಗೂ ನನ್ನ ಧನ್ಯವಾದಗಳು.

ವಿಸ್ತೃತವಾಗಿ ನಿಂತಿರುವ ನಮ್ಮ ಸಾಮ್ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ನೆಲೆಸಿರುವ ಸ್ತ್ರೀಪುರುಷರು ಈಗ ಒಂದೇ ಉದ್ದೇಶವುಳ್ಳವರಾಗಿರುತ್ತಾರೆ. ಸ್ವಾತಂತ್ರ್ಯಕ್ಕಾಗಿ ಇವರೆಲ್ಲರೂ ತ್ಯಾಗಮಾಡುವವರಿದ್ದಾರೆ. ಸಾಮ್ರಾಜ್ಯಾಂತರ್ಗತ ರಾಷ್ಟ್ರಗಳ, ಭಾರತದ, ಮತ್ತು ಇತರ ವಸಾಹತುಗಳ ಸ್ವಾತಂತ್ರ ಪ್ರೇಮವು ಈ ರೀತಿ ಇದೆ. ಇವರೆಲ್ಲರೂ ನಮಗೆ ಬೆಂಬಲವಿತ್ತಿದ್ದಾರೆ. ಇದಕ್ಕೆ ನಾವೆಷ್ಟು ಕೃತಜ್ಞರಾಗಿದ್ದರೂ ಸಾಲದು. ಇಂಥ ಸಹಕಾರವೂ, ಸೌಹಾರ್ದವೂ ಹಿಂದೆಂದೂ ಪ್ರದರ್ಶಿತವಾಗಿರಲಿಲ್ಲ.

ಈ ನೂತನ ವರ್ಷದಲ್ಲಿ ಏನೇನು ಸಂಭವಿಸುವದೋ ಯಾರು ಬಲ್ಲರು? ಹೊಸ ವರ್ಷವು ಶಾಂತಿಯನ್ನು ತಂದರೆ ನಮಗೆ ಎಷ್ಟು ಆನಂದವೋ ಹಾಗೆಯೇ ಕದನದ ಕತ್ತಲನ್ನು ತಂದರೂ ಅದಕ್ಕೂ ಸಿದ್ಧ. ನೂತನ ವರ್ಷದ ಹೆಬ್ಬಾಗಿಲಿನಲ್ಲಿ ಯಾವ ಕಾರ್ಯಕ್ರಮಗಳು ನಮ್ಮನ್ನು ಕಾದಿವೆಯೆಂದು ಹೇಳುವದು ಅಸಾಧ್ಯ. ಎಂಥಾ ಕಗ್ಗತ್ತಲೆಯ ಕಾರ್ಯಗಳು ಕವಿದರೂ ಆ ಪರಂಜ್ಯೋತಿಯ ಆಮೃತಹಸ್ತವು ನಮ್ಮನ್ನು ಸುಗಮವಾದ ಹಾದಿಯಲ್ಲಿ ಮುನ್ನಡೆಸುವದು.' ಎಂದು ಬ್ರಿಟಿಷ್ ಸಾರ್ವಭೌಮರು ಕ್ರಿಸ್ಮಸ್ ಸಮಯದಲ್ಲಿ ಒಂದು ಬ್ರಾಡ್‌ಕಾಸ್ಟ್ ಭಾಷಣ ಮಾಡಿ ತಮ್ಮ ಸೈನ್ಯಕ್ಕೆ ಹುರುಪನ್ನಿತ್ತಿರುವರು.

ಕಾನ್‌ಸ್ಟಿಟ್ಯುಯೆಂಟು ಅಸೆಂಬ್ಲಿ.

ಶ್ರೀ ರಾಜಗೋಪಾಲಾಚಾರ್ಯರ ಅಭಿಪ್ರಾಯ.

ಸರ್ ಮಾರಿಸ್‌ಗ್ವಯರ್‌ರವರು (ಫೆಡರಲ್ ಕೋರ್ಟಿನ ಛೀಫ್ ಜಡ್ಜರು) ಕಾಶಿ ವಿಶ್ವವಿದ್ಯಾನಿಯಲವ ಘಟಿಕೋತ್ಸವವದಲ್ಲಿ ಮಾಡಿವ ಭಾಷಣದಲ್ಲಿ, ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿ ವಿಚಾರವನ್ನು ಪ್ರಸ್ತಾಪಿಸಿದರು. ಅವರು ಎರಡು ಆಕ್ಷೇಪಣೆಗಳನ್ನು ಸೂಚಿಸಿದರು. ಅವಾವುಯೆಂದರೆ:-

(1) ಅಸೆಂಬ್ಲಿ ಬಹಳ ದೊಡ್ಡದಾದರೆ, ರಾಜ್ಯಾಂಗ ವಿಧಾನವನ್ನು ರಚಿಸುವುದು ಕಷ್ಟವಾಗುತ್ತದೆ.

(2) ಮಹಮದೀಯರು ಈ ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿ ತತ್ವವನ್ನು ವಿರೋಧಿಸುತ್ತಿದ್ದಾರೆ. ಆವರು ಇದನ್ನು ಬಹಿಷ್ಕರಿಸಿದರೂ ಬಹಿಷ್ಕರಿಸಬಹುದು.

ಈ ಎರಡು ಆಕ್ಷೇಪಣೆಗಳಿಗೆ ಶ್ರೀ ಸಿ. ರಾಜಗೋಪಾಲಾಚಾರ್ಯರು ಈ ರೀತಿ ಜವಾಬು ಕೊಟ್ಟಿದ್ದಾರೆ:-

(1) ಮೊದಲನೇ ಆಕ್ಷೇಪಣೆಗೆ ಈ ರೀತಿ ಜವಾಬು ಕೊಡಬಹುದು. ಹೇಗೆಂದರೆ, ಅಸೆಂಬ್ಲಿಯ ಸಂಖ್ಯೆ ಹೆಚ್ಚಾದರೆ, ಅಪ್ರತ್ಯಕ್ಷ ಚುನಾವಣೆ ಪದ್ಧತಿಯನ್ನೋ ಅಥವಾ ಸೆಲೆಕ್ಟ್ ಕಮಿಟಿ ಪದ್ಧತಿಯನ್ನೋ ಅನುಸರಿಸಬಹುದು.

(2) ಎರಡನೆಯದಾಗಿ ಮುಸಲ್ಮಾನರು ಸದಾ ಬ್ರಿಟಿಷ್ ಅಧೀನದಲ್ಲೇ ಇರಬೇಕೆಂದು ಬಯಸುತ್ತಾರೇನು? ಇಲ್ಲ. ಅವರಿಗೂ ಸ್ವಾತಂತ್ರ್ಯಬೇಕು. ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಯಿಂದ ಬರುವ ರಾಜ್ಯಾಂಗಕ್ಕಿಂತ ಉತ್ತಮವಾದ ರಾಜ್ಯಾಂಗ ಬ್ರಿಟಿಷರಿಂದ ದೊರಕುವುದೆಂಬ ಆಸೆ ಅವರಿಗ ಇಲ್ಲವಷ್ಟೆ. ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಯನ್ನೇರ್ಪಡಿಸುವುದು ಅಲ್ಪ ಸಂಖ್ಯಾತರ ಮೇಲೆ ದಬ್ಬಾಳಿಕೆ ನಡೆಸುವ ಉದ್ದೇಶದಿಂದಲ್ಲ. ಆಯಾ ಅಲ್ಪ ಸಂಖ್ಯಾತ ಕೋಮುಗಳಿಗೆ ಅನ್ವಯಿಸುವ ವಿಚಾರಗಳು ಆಯಾ ಅಲ್ಪ ಸಂಖ್ಯಾತ ಪಂಗಡಗಳ ಪ್ರತಿನಿಧಿಗಳ ಬಹುಮತ ಸಮ್ಮತಿಯಿಂದಲೇ ನಿರ್ಣಯವಾಗಲೆಂದು ನಾವು ಹೇಳಿದ್ದೇವೆ. ಮಹಮದೀಯರಿಗೂ, ಅಲ್ಪ ಸಂಖ್ಯಾತರಿಗೂ ಪ್ರತ್ಯೇಕ ಚುನಾವಣಾ ಪದ್ಧತಿ ಪ್ರಕಾರ ಪ್ರಾತಿನಿಧ್ಯ ದೊರಕಲಿ ಎಂದೂ ಹೇಳಿದ್ದೇವೆ. ಹೀಗಿರುವಾಗ ಮಹಮದೀಯರೇಕೆ ಈ ಅಸೆಂಬ್ಲಿಗೆ ವಿರೋಧವನ್ನು ತೋರ್ಪಡಿಸಬೇಕೋ ನಾ ಬೇರೆ ಕಾಣೆ. ಕೋಮುವಾರು ಮಿಶ್ರ ಮಂತ್ರಿ ಮಂಡಲಗಳಿಂದ ಏನೂ ಪ್ರಯೋಜನವಿಲ್ಲ. ಅದು ನಮಗೆ ಬೇಡ.

ಯುದ್ಧ ವಾರ್ತೆ.

ರಷ್ಯಾ ಫಿನ್‌ಲೇಂಡ್ ಯುದ್ಧ.

ಫಿನ್‌ಲೇಂಡಿನಲ್ಲಿ ಘನಘೋರ ಯುದ್ಧವು ನಡೆಯುತ್ತಿದೆ. ನೂರು ರಷ್ಯಾ ವಿಮಾನಗಳು ತಾರೀಕು 25 ರಲ್ಲಿ ಹೆಲ್ಸಂಕಿಯ ಮೇಲೆ ಹಾರಿ ಬಂದು ಅನೇಕ ಬಾಂಬುಗಳನ್ನು ಪ್ರಯೋಗಿಸಿದವು. ರಷ್ಯನ್ ವಿಮಾನಗಳು ಹೆಲ್ಸಂಕಿಯಿಂದ ಹೊರಟು ರೈಲ್ವೇ ಮಾರ್ಗದ ಮೇಲೆ ಹಾದು ರ್ಯೂಬಿಮೂಕಿ ರೈಲ್ವೆ ಜಂಕ್ಷನಿನ ಮೇಲೆ ಬಲವಾಗಿ ಬಾಂಬು ಕಾರಿದವು. ಫಿನ್ನರು ರಷ್ಯನರ ವಿಮಾನ ಪಡೆಯನ್ನು ಎದುರಿಸಿ ಮೂರು ವಿಮಾನಗಳನ್ನು ನಾಶಪಡಿಸಿರುವರು.

ಕಾರಿಲಿಯಾ ಭೂಶಿರ ಪ್ರಾಂತದಲ್ಲಿ ಜರುಗಿದ ಯುದ್ಧದಲ್ಲಿ ತಾರೀಕು 24 ರಲ್ಲಿ 971 ಫಿನ್ನಿಷ್ ಸೈನಿಕರು ಮಡಿದರು. 35 ಜನರು ಸೆರೆಯಾಳಾಗಿರುವರು.

ರಷ್ಯಾ ಫಿನ್‌ಲೇಂಡ್ ಯುದ್ಧವಾಗಿ ಮೂರು ವಾರಗಳಾಯಿತು. ಈ ಅವಧಿಯಲ್ಲಿ ರಷ್ಯಾ ಸೇನೆಗೆ ತುಂಬಾ ನಷ್ಟ ಸಂಭವಿಸಿದೆಯೆಂದೂ, ಅವರ ಸೇನಾತುಕಡಿಗಳೆಲ್ಲವೂ ಚಲ್ಲಾಪಿಲ್ಲಿಯಾಗಿ ಚದರಿ ಹೋಗಿವೆಯೆಂದೂ ಫಿನ್ನರು ಹೇಳುತ್ತಿರುವರು. ಅಲ್ಲದೆ 'ನಾವೆಷ್ಟು ಮಟ್ಟಿಗೆ ರಷ್ಯನರನ್ನು ಹೊಡೆದಟ್ಟುತ್ತಿದ್ದರೂ ರಷ್ಯನ್ ಸೇನಾಧಿಪತಿಗಳು ಅವರ ಸೈನ್ಯವನ್ನು ನಮ್ಮ ಕಡೆಗೆ ನಿರ್ಧಯದಿಂದ ಓಡಿಸುತ್ತಿದ್ದಾರೆ. ನಾವುಗಳು ವಶಪಡಿಸಿಕೊಂಡಿರುವ ಮತ್ತು ನಾಶಪಡಿಸಿರುವ ಶತ್ರು ಟ್ಯಾಂಕುಗಳ ಸಂಖ್ಯೆ 200 ಕ್ಕೆ ಮೇಲ್ಪಟ್ಟಿದ. 12 ಕ್ಕೆ ಮೇಲ್ಪಟ್ಟು ಶತ್ರು ವಿಮಾನಗಳನ್ನು ಉರುಳಿಸಿದ್ದೇವೆ. ನೂರಾರು ಮಿಶಿನ್ ಗನ್‌ಗಳನ್ನು ವಶಪಡಿಸಿಕೊಂಡಿದ್ದೇವೆ. ಮ್ಯಾನರ್ಹೀಂ ಕೋಟೆಯ ಪ್ರದೇಶ ಕಾರೀಲಿಯಾ ಭೂಶಿರ ಪ್ರಾಂತಗಳಲ್ಲಿ ಶತ್ರುವಿಗೆ ವಿಪರೀತ ನಷ್ಟವಾಗಿದೆ. ಆ ಸ್ಥಳಗಳಲ್ಲಿ ಆವರು ಆಕ್ರಮಿಸಿಕೊಂಡ ಒಂದು ಗಜದಷ್ಟು ಸ್ಥಳಕ್ಕೂ ಅವರು ಭಾರಿ ನಷ್ಟದ ಕಾಣಿಕೆಯನ್ನು ಕಟ್ಟಿದ್ದಾರೆ.' ರಷ್ಯನರ ಅಮೋಘ ಸೈನ್ಯಪಡೆಯು ಫಿನ್ನರನ್ನು ಬಗ್ಗುಬಡಿಯಲು ಮೇಲೆ ಮೇಲೆ ಬಂದರೂ ಫಿನ್ನಿಷ್ ವೀರಯೋಧರು ಅವರಿಗೆ ತಕ್ಕ ಪ್ರತೀಕಾರ ಮಾಡುತ್ತಿರುವರು.

ಕೂಹ್ಮಲ್ ಪ್ರದೇಶದಲ್ಲಿ ಫಿನ್ನರು ಎರಡು ರಷ್ಯನ್ ಕಂಪೆನಿಗಳನ್ನು ನಾಶಮಾಡಿದ್ದಾರೆ. ಲೀಕ್ಯಾ ಫಿನ್ನರು ರಷ್ಯಾದೊಳಗೆ ನುಗ್ಗಿಯು ಯುದ್ಧ ಮಾಡಿದರು. ಲಯ್ಮೋಲಂಪಲ್ಲಿ ರಷ್ಯನರು ಫಿನ್‌ಲೇಂಡಿನೊಳಗೆ ನುಗ್ಗಿ ಬರುತ್ತಿದ್ದಾರೆ.

ತಾರೀಕು 26 ರಲ್ಲಿ ರಷ್ಯನರು ಟ್ಯಾಂಕುಗಳ, ವಿಮಾನಗಳ, ತೋಪುಗಳ ಸಮೇತ ಸುವಾಂಟೋ ಸರೋವರವನ್ನು ದಾಟುವ ಉದ್ದೇಶದಿಂದ ದಂಡೆತ್ತಿ ಬಂದಾಗ್ಯೆ ಫಿನ್ನರು ಅವರನ್ನು ಮುತ್ತಿ ವಿಪರೀತ ನಷ್ಟ ಮಾಡಿದರು. ಐದು ತೋಪುಗಳು, 60 ಮೆಶಿನ್ ಗನ್ನುಗಳು ಮತ್ತು ಐದು ಫಿರಂಗಿಗಳನ್ನು ಫಿನ್ನರು ವಶಪಡಿಸಿಕೊಂಡಿರುವರಲ್ಲದೆ ಐನೂರು ಸೈನಿಕರನ್ನು ಸೆರೆ ಹಿಡಿದಿರುವರು. ಸುವಾಂಟೋ ಸರೋವರದಲ್ಲಿ ಮಂಜುಗಡ್ಡೆ ಕಟ್ಟಿಕೊಂಡದ್ದರಿಂದ ನೀರಿನ ಮೇಲೆ 700 ಜನ ರಷ್ಯನರು ಮಡಿದು ಹೋದರು. ಪೂರ್ವ ರಂಗದಲ್ಲಿ ರಷ್ಯನರ 20 ಲಾರಿಗಳು ನಾಶವಾದುವು. ಲಡೋಗ ಸರಸ್ಸಿನ ತೀರ ಪ್ರದೇಶದಲ್ಲಿ ಫಿನ್ನರು 4 ಶತ್ರು ವಿಮಾನಗಳನ್ನು ಹೊಡೆದು ಕೆಡವಿದರು.

ಪಶ್ಚಿಮ ರಣರಂಗ.

ಬ್ರಿಟಿಷ್-ಫ್ರಾನ್ಸ್-ಜರ್ಮನಿ ಯುದ್ಧ.

ಮೋಸೆಲ್‌ಗೆ ಪೂರ್ವ ದಿಕ್ಕಿನಲ್ಲಿ ಶತ್ರುಗಳ ಚಟುವಟಿಕೆ ಹೆಚ್ಚಿದ್ದಿತು. ಮಂಜು ಧಾರಾಕಾರವಾಗಿ ಬೀಳುತ್ತಿರುವದರಿಂದ ದೃಷ್ಟಿಪಥ ಇಕ್ಕಟ್ಟಾಗಿದೆ. ಆದುದರಿಂದ ವಿಮಾನ ಯುದ್ಧ ಅಸಾಧ್ಯವಾಗಿದೆ. ಮೋಸೆಲ್‌ಗೆ ಪೂರ್ವ ಭಾಗದಲ್ಲಿ ಶತ್ರುವಿನ ಬೇಹ್ರಗಾರರ ಪಡೆಯನ್ನು ಫ್ರೆಂಚ್ ಫಿರಂಗಿಗಳು ಹೊಡೆದಟ್ಟಿದವು.

ಸ್ಟಾನ್‌ಹೋಂ ಎಂಬ ಬ್ರಿಟಿಷ್ ಹಡಗನ್ನು ತಾ. 25 ರಲ್ಲಿ ಜರ್ಮನ್ ಸಬ್‌ಮೆರೀನೊಂದು ಮುಳುಗಿಸಿದೆ. ಇದರಿಂದ 14 ಮಂದಿ ಮೃತರಾಗಿರುವರಲ್ಲದೆ 10 ಮಂದಿ ಗಾಯಗೊಂಡಿರುವರು.

ಕ್ರಿಸ್‌ಮಸಿನ ಹಬ್ಬವಾದರೂ ತಾ. 25 ರಲ್ಲಿ ರಾಯಲ್ ಏರ್‌ಫೋರ್ಸಿನ ವಿಮಾನಗಳು ಎಚ್ಚರಿಕೆಯಿಂದಲೇ ಇದ್ದವು.

ಹೊಲ್ಲೋಲೇಂಡಿನ ಬೈಟ್ ಎಂಬಲ್ಲಿ ತಾ. 25 ರಲ್ಲಿ ಜರ್ಮನ್ ಕಾವಲು ಜಹಜುಗಳ ಮೇಲೆ ಧಾಳಿ ಮಾಡಲು ಬ್ರಿಟಿಷ್ ಯುದ್ಧ ವಿಮಾನಗಳು ಪ್ರಯತ್ನಿಸಿದವು. ಆದರೆ ಜರ್ಮನ್ ಜಹಜುಗಳು ಮೆಶಿನ್ ಗನ್ನುಗಳನ್ನು ವಿಮಾನಗಳ ಕಡೆಗೆ ತಿರುಗಿಸಿ ಉಡಾಯಿಸಿದ ಪ್ರಯುಕ್ತ ಬ್ರಿಟಿಷ್ ವಿಮಾನಗಳ ಆಕ್ರಮಣ ಪ್ರಯತ್ನವು ನಿಷ್ಫಲವಾಯಿತು.

ಮೂರಾಟಕ್ಕೆ ಸಿದ್ಧವಾಗಿದೆ.

ತಿತಿಮತಿಯ ಸಮೀಪ ಸರ್ಕಾರಿ ರಸ್ತೆ ಬಾಜಿನಲ್ಲಿ ಮೂರು ಕೆರೆಗಳ ಆಧಾರದಿಂದ ನೀರು ಸಿಕ್ಕುವ ಸುಮಾರು ಒಂದು ಸಾವಿರ ಬಟ್ಟೆ ಭೂಮಿ ಮತ್ತು ಕಿತ್ತಳೆ ಸಾಗುವಳಿಗೆ ಅತ್ಯುತ್ತಮವಾದ ಕಾಡು, ದನಕರಗಳನ್ನು ಇಟ್ಟು ಪರಿಪಾಲಿಸುವುದಕ್ಕೆ ಶ್ರೇಷ್ಠವಾದ ಸ್ಥಳ. ಒಟ್ಟನಲ್ಲಾಗಲೀ, ಚಿಲ್ಲರೆಯಲ್ಲಾಗಲೀ, ಮೂರಾಟಕ್ಕಿದೆ.

ಜಿ. ವಿ. ಕೃಷ್ಣಸ್ವಾಮಿ ನಾಯಡು.

ಹೊಸಳ್ಳಿ,
ಪಾಲ್ಲಿಬೆಟ್ಟ ಪೋಸ್ಟು,
4-2. (ಕೊಡಗು)

ಕಾಂಗ್ರೆಸ್ ಚುನಾವಣೆ ವೇಳಾಪತ್ರಿಕೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯಿಂದ ಬದಲಾಯಿಸಿದ ತಾರೀಕುಗಳಿಗನುಸಾರವಾಗಿ ಈ ಸಮಿತಿಯು ಹಿಂದೀ ರಾಷ್ಟ್ರೀಯ ಸಭೆಯ ಬರುವ ಅಧಿವೇಶನದ ಪ್ರತಿನಿಧಿಗಳ ಚುನಾವಣೆಗಾಗಿ ಈ ಕೆಳಗಿನ ವೇಳಾಪತ್ರಿಕೆಯನ್ನು ಸ್ವೀಕರಿಸುತ್ತದೆ.

ರಾಮಗಡ ಕಾಂಗ್ರೆಸ್ ಪ್ರತಿನಿಧಿ ಚುನಾವಣೆ ವೇಳಾಪತ್ರಿಕೆ.

1. ನಾಮ ಪತ್ರ ಸ್ವೀಕರಿಸುವದು	8-1-40ರಿಂದ 13-1-40 ರ ಸಂಜೆ 6 ಗಂಟೆ ವರೆಗೆ
2. ನಾಮ ಪತ್ರ ಪರಿಶೀಲನೆ ಹಾಗೂ ಉಮೇದ್ವಾರರ ಹೆಸರುಗಳನ್ನು ಪ್ರಸಿದ್ಧಿಸುವದು.	16-1-1940
3. ನಾಮ ಪತ್ರ ಹಿಂತೆಗೆದುಕೊಳ್ಳುವದು	19-1-40 (ಮಧ್ಯಾಹ್ನ 3 ಗಂಟೆಯ ವರೆಗೆ)
4. ನಾಮ ಪತ್ರ ಹಿಂತೆಗೆದುಕೊಂಡವರ ಹಾಗೂ ಅವಿರೋಧವಾಗಿ ಆರಿಸಿ ಬಂದವರ ಹೆಸರುಗಳನ್ನು ಚುನಾವಣೆ ಅಧಿಕಾರಿಗಳು (R.'Os.) ಪ್ರಕಟಿಸುವದು.	19-1-40 (ಮಧ್ಯಾಹ್ನ 3 ಗಂಟೆಯ ನಂತರ)
5. ಪ್ರತಿನಿಧಿ ಚುನಾವಣೆ—ಮುಂಜಾನೆ 8 ರಿಂದ ಮಧ್ಯಾಹ್ನ 12ರ ವರೆಗೆ. ಮಧ್ಯಾಹ್ನ 2 ರಿಂದ ಸಂಜೆ 6ಗಂಟೆಯ ವರೆಗೆ	28-1-40
6. ಚುನಾವಣೆ ಅಧಿಕಾರಿಗಳಿಗೆ ಮತದಾನ ಪೆಟ್ಟಿಗೆಗಳನ್ನು ಮುಟ್ಟಿಸುವದು	29-1-40 (ಮಧ್ಯಾಹ್ನ 12 ಗಂಟೆಯೊಳಗಾಗಿ)
1. ಮತಗಣನೆ—ಮಧ್ಯಾಹ್ನ 11ರಿಂದ 1 ಗಂಟೆಯೊಳಗಾಗಿ ಪ್ರಾರಂಭಿಸುವದು. ಮತಗಣನೆ ಮುಗಿದ ಕೂಡಲೆ ಪರಿಣಾಮ ಪ್ರಕಟಿಸುವದು.	30-1-40
8. ಚುನಾವಣೆಯ ಎಲ್ಲಾ ಕಾಗದ ಪತ್ರಗಳನ್ನು ಚುನಾವಣೆ ಅಧಿಕಾರಿಗಳ ವರದಿಯೊಂದಿಗೆ ಕ. ಪ್ರಾಂ. ಕಾಂ. ಸ. ಕಚೇರಿಗೆ ಕಳಿಸುವದು	1-2-40
9. ಚುನಾವಣೆ ತಕರಾರು ಅರ್ಜಿ ಕೊಡುವದು	8-2-40 (ಸಂಜೆ 5 ಗಂಟೆಯ ವರೆಗೆ)

ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಚುನಾವಣೆಗಳು.

1940 ನೇ ಇಸವಿ ಫೆಬ್ರವರಿ ತಿಂಗಳ ಕೊನೆಯ ವಾರದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಸದಸ್ಯರ ಚುನಾವಣೆಗಳೂ, ಮಾರ್ಚಿ ತಿಂಗಳು ಎರಡನೇ ವಾರದಲ್ಲಿ ಜಿಲ್ಲಾ ಸಮಿತಿಗಳ ವಾರ್ಷಿಕ ಸಭೆಯು ಕರಿಸಲ್ಪಟ್ಟು ಅಧಿಕಾರಿ ವರ್ಗದ ಚುನಾವಣೆಗಳೂ ನಡೆಯಬೇಕೆಂದು ಈ ಕಾರ್ಯಕಾರಿ ಮಂಡಲವು ನಿರ್ಧರಿಸಿ ಅದರಂತೆ ಜಿಲ್ಲಾ ಸಮಿತಿಗಳಿಗೆ ಆಜ್ಞೆ ಮಾಡುತ್ತದೆ.

ಎನ್. ಎಸ್. ಹರ್ಡೀಕರ್,
ಗೌರವ ಕಾರ್ಯದರ್ಶಿ,
ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿ.

TRY OUR DIVINE TREATMENTS ONLY.

Good Success, in Every act & Business.

No More Anxieties–25,000 Cured–Tested and Approved Hysteria, Epilepsy, Sorcery Demons, Cynic Satans & Ghosts cured completely due to whatsoever Causes & effects rudimental and abotruse within twenty four hours. People have acknowledged frankly their appreciation concerning the success they have derived from our Divine & Magical Service. Consult us relating to your troubles and miseries. Outsiders accomodated.

The manager,
Fortelling Office,
Vallur Mattam,
Tiruvemgad,
Tellichery.

4-4

ಒಳದೇಶ.

ರಾಮಗಡ ಕಾಂಗ್ರೆಸ್ ಅಧಿವೇಶನದ ಪ್ರತಿನಿಧಿಗಳ ಚುನಾವಣೆಯನ್ನು ಯೋಗ್ಯ ರೀತಿಯಿಂದ ನಾಗಿಸಲು ಶ್ರೀ ಕಂಜಿ ತಂಡ ಕುಶಾಲಪ್ಪನವರನ್ನು ಚುನಾವಣಾ ಅಧಿಕಾರಿಯನ್ನಾಗಿ (ರಿಟರ್ನಿಂಗ್ ಆಫೀಸರು) ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರು ನೇಮಿಸಿರುವರು.

ಇದೇ ತಿಂಗಳ ತಾ 8ರ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟ ಪ್ರಕಾರ ಅಸ್ವಸ್ಥನಾಗಿದ್ದು ಆನಂದ ಮಂಚಯಲ್ಲಪ್ಪ ಕ್ರಿಷ್ಟಿಯನ್ ಅಸ್ಪಣ್ಣನವರ ಮೇಲೆ ಮಡಿಕೇರಿ ಸಿವಿಲ್ ಕೋರ್ಟಿನಲ್ಲಿ ಆತ ತಂದೊಡ್ಡಿರುವ ನಷ್ಟವನ್ನು ರದ್ದುಪಡಿಸಬೇಕಾಗಿ ಬೆಂಗಳೂರು ಹೈಕೋರ್ಟಿನಲ್ಲಿ ಸದರಿಯವರು ಅಪೀಲು ದಾಖಲು ಮಾಡಿರುವರೆಂದೂ, ಆಪ್ಪರಿಂದ ಸದರಿಯವರನ್ನು ಜಾಮೀನಿನ ಮೇಲೆ ಬಿಡಲಾಗಿದೆಯೆಂದೂ ತಿಳಿಯಬರುತ್ತದೆ.

ಮಡಿಕೇರಿ.

ಶೀಘ್ರದಲ್ಲೇ ಇಲ್ಲಿಗೆ ಇನ್ನೊಂದು ಸಿನಿಮಾ ಕಂಪೆನಿ ಬರುತ್ತದೆಯೆಂಬ ಸುದ್ದಿ.

ಇಲ್ಲಿ ಯೂಲಕ್ಕಿ ಮಣಕ್ಕೆ ರೂ. 36 ರ ವರೆಗೂ ಕಾಫಿ ಖಂಡಿಗೆ ರೂ. 128 ರ ವರೆಗೂ ಕ್ರಯವಿರುತ್ತೆ.

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯು ವಿಂಟಿಂಗೊಂದು ತಾ. 5ನೇ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಕೊಡಗು ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡೆಯುವದೆಂದು ತಿಳಿಯಬರುತ್ತದೆ.

ಅಖಿಲ ಭಾರತ ರಿಜಿಸ್ಟ್ರೇರರ ಕಾನ್ ಫರೆನ್ಸಿಗೆ ಉದ್ಯೋಗಸ್ಥರಲ್ಲದ ಪ್ರತಿನಿಧಿಯಾಗಿ ಹೋಗಿದ್ದ ಸೆಂಟ್ರಲ್ ಬ್ಯಾಂಕಿನ ಪ್ರೆಸಿಡೆಂಟರಾದ ಶ್ರೀ ಪಿ. ಐ. ಬೆಳ್ಳಿಪ್ಪನವರು ಹಿಂತಿರುಗಿ ಬಂದಿರುವರುವರು.

ವಿದ್ಯಾ ಆರೋಗ್ಯ ಮತ್ತು ಜಮೀನುಗಳ ಪೈಸರಾಯರ ಎಗ್ಸಿಕ್ಯೂಟಿವ್ ಕೌನ್ಸಿಲಿನ ಸದಸ್ಯರಾದ ಸರ್. ಜಗದೀಶ ಪ್ರಸಾದರವರು ತಾ. 5ರಲ್ಲಿ ಇಲ್ಲಿಗೆ ಬಂದು ಮರುದಿನ ಹೋಗುವರಾಗಿ ತಿಳಿಯುತ್ತೇವೆ.

ಸಬ್‌ಜಡ್ಜರಾಗಿದ್ದ ಶ್ರೀ ತಿರುಮಲಾಚಾರಿ ಬಿ. ಎ. ಬಿ. ಎಲ್.ರವರು ತಮ್ಮ ಹುದ್ದೆಯಿಂದ ನಿವೃತ್ತರಾಗಿ ತಾರೀಕು 25ರಲ್ಲಿ ಮುನ್ಸೀಫರಾಗಿರುವ ಶ್ರೀ ನಿಡ್ಯಮಲೆ ಮುದ್ದಪ್ಪನವರಿಗೆ ತಮ್ಮ ಹುದ್ದೆಯ ಚಾರ್ಜನ್ನು ಕೊಟ್ಟಿರುವರೆಂದೂ, ಸಬ್‌ಜಡ್ಜರ ಹುದ್ದೆಯನ್ನು ಮುಂದಕ್ಕೆ ವಜಾ ಮಾಡಿ ಸ್ಥಳೀಯರೊಬ್ಬರನ್ನೇ ಡಿಸ್ಟ್ರಿಕ್ಟ್ ಜಡ್ಜನ್ನಾಗಿ ಮಾಡುವ ಏರ್ಪಾಡಿದೆಯೆಂದೂ ತಿಳಿಯುತ್ತೇವೆ.

ವೀರಾಜಪೇಟೆ

ಕ್ರೌನ್ ಟೂರಿಂಗ್ ಟಾಕೀಸಿನ ನಿರ್ವಾಹಕರು ತಾ. 20-12-38ರಂದು ಇಲ್ಲಿ ಜಲನ ಚಿತ್ರಗಳನ್ನು ಪ್ರದರ್ಶಿಸಲು ಪ್ರಾರಂಭಿಸಿರುವರು.

ಇಲ್ಲಿಯ ಮುಸ್ಲಿಮರು ಪ್ರಾಂತೀಕ ಮುಸ್ಲಿಂ ಲೀಗಿನ ಆಶ್ರಯದಲ್ಲಿ 'ಮೀಲಾದ್ ಜನಾ ದಿನ'ವನ್ನು ತಾ. 22ರಲ್ಲಿ ಆಚರಿಸಿ ಮುಸ್ಲಿಂ ಲೀಗಿನ ಮುಖಂಡರಾದ ಮಿ. ಜಿನ್ನಾರವರಲ್ಲಿ ಸಂಬಂಧಿಯು ಒಡಾಟವನ್ನು ಮಾಡಿದರೆಂದು ತಿಳಿಯುತ್ತೇವೆ.

ವರ್ತಮಾನ ಸಂಗ್ರಹ.

ಹಿಂದೂದೇಶ.

ಕಾಂಗ್ರೆಸ್ ಮಂತ್ರಿಗಳ ರಾಜೀನಾಮೆ ಕುರಿತು ಸರ್ ಸಾಮ್ಯುಲ್ ಹೋರರು ಕಾಂಗ್ರೆಸ್ ಮಂತ್ರಿಗಳ ಸ್ತುತ್ಯ ಕಾರ್ಯಗಳಿಗೆ ಅವರಿಂದ ತಡೆಯೊವದ್ದು ದೇಶವ ದೌರ್ಭಾಗ್ಯವೆಂದರು.

ನಾಗಪುರ ನಗರದಲ್ಲಿ ಮದ್ಯನಿಷೇಧ ವಿಲ್ಲವೆಂಬ ಸರಕಾರದ ಈ ಆಜ್ಞೆಯನ್ನು ಅಲ್ಲಿನ ಮುನ್ಸಿಪಾಲಿಟಿ ಪ್ರತಿಭಟಿಸಿ, ಆ ಮುನ್ಸಿಪಾಲಿಟಿಯ ಸರಹದ್ದಿನೊಳಗೆ ಯಾವ ಮದ್ಯದ ಅಂಗಡಿಯೂ ಇರಕೂಡದೆಂದು ನಿರ್ಬಂಧಿಸಿದೆ.

ಝಾನ್ಸಿಯಲ್ಲಿ ಶ್ರೀ. ಜಿನ್ನಾರವರ ವಂದನಾರ್ಪಣೆಯ ದಿನಾಚರಣೆಯ ವಿರೋಧವಾಗಿ ಒಂದು ಮುಸ್ಲಿಮರ ಸಭೆ ಏರ್ಪಟ್ಟದ್ದು, ಅಲ್ಲಿ ಜಿನ್ನರ ನಾಯಕತ್ವದ ಏಚಾರದಲ್ಲಿ ಚರ್ಚೆ ಎದ್ದು, ಅದರ ಪರಿಣಾಮವಾಗಿ ಗಲಭೆಯೂಗಿ, ಅವರಲ್ಲೇ ಸಭೆ ಮುಕ್ತಾಯವಾಯಿತು.

ಬಂಗಾಳ ಸರ್ಕಾರದ ಆರ್ಥ ಸಚಿವರಾದ ಶ್ರೀ ನಳಿನಿರಂಜನ ಸರ್ಕಾರರು ತಮ್ಮ ಸಚಿವ ಪದವಿಗೆ ರಾಜಿನಾಮೆ ಕೊಟ್ಟಿದ್ದಾರಷ್ಟೆ. ಈ ವಿಷಯದಲ್ಲಿ ಅವರನ್ನು ಪ್ರಸಂಶಿಸಿ ಮಹಾತ್ಮ ಗಾಂಧಿಯವರು ಈ ರೀತಿ ಕಾಗದ ಬರೆದಿದ್ದಾರೆ-'ಬಂಗಾಳ ಮಂತ್ರಿ ಮಂಡಲದಲ್ಲಿ ನೀವು ವಹಿಸಿಕೊಂಡಿದ್ದ ಸಚಿವಾಧಿಕಾರಕ್ಕೆನೀವು ರಾಜಿನಾಮೆ ಕೊಟ್ಟರಿಂದು ಮೌಲಾನಾ ಸಾಹೇಬರವರು ನನಗೆ ತಿಳಿಸಿದ್ದಾರೆ. ನೀವು ದೇಶಾಭಿಮಾನ ಪೂರಿತವಾದ ಕಾರ್ಯವನ್ನೆಸಗಿದ್ದೀರೆಂದು ನನ್ನ ಭಾವನೆ.'

ಯೂರೋಪಿನ ಯುದ್ಧದ ದೆಸೆಯಿಂದ ಆಹಾರ ಪದಾರ್ಥಗಳ ಧಾರಣೆವಾಸಿಗಳು ಹಿಂದೂಸ್ಥಾನದ ಆದ್ಯಂತದಲ್ಲೂ ಏರಿ ಹೋಗಿನೆಯಷ್ಟೆ. ಧಾರಣೆವಾಸಿಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು ಒಂದೊಂದು ಪ್ರಾಂತ್ಯದ ಸರ್ಕಾರದವರು ಒಂದೊಂದು ಏರ್ಪಾಡು ಮಾಡುತ್ತಿದ್ದಾರೆ. ಅತ್ತಲಾಗಿ ಕರಾಚಿಯಲ್ಲಿ ಪೌರಸಭೆಯವರು ತಮ್ಮೂರಿನ ಪ್ರತಿಯೊಂದು ಮೊಹಲ್ಲೆಯಲ್ಲೂ ಒಂದೊಂದು ದಿನಸಿ ಅಂಗಡಿಯನ್ನು ತಾವೇ ಇಟ್ಟು ಪ್ರಜೆಗಳಿಗೆ ಯಾವ ಮೋಸವೂ ಆಗದಂತೆ ಚಿಗ್ಗವಾಗಿ ಆಹಾರ ಸಾಮಗ್ರಿಗಳನ್ನು ಬಿಕರಿ ಮಾಡಲು ನಿಶ್ಚೈಸಿರುತ್ತಾರೆ. ಬೊಂಬಾಯಿನಲ್ಲೂ ಸಹ ಇದೇ ರೀತಿಯ ಏರ್ಪಾಡಾಗುವ ಸೂಚನೆ ಇದೆ.

ಟಿಕೇಟಿಲ್ಲದ ರೈಲ್ವೆ ಪ್ರಯಾಣ ಮಾಡಿದುದಕ್ಕಾಗಿ ನ್ಯಾಯಾಧೀಶರು ಒಬ್ಬ ಗೋಸಾಯಿಗೆ ಒಂದು ವಾರದ ಸಾದಾ ಸಜಾ ಶಿಕ್ಷೆಯನ್ನು ವಿಧಿಸಿದರು. ಆತನನ್ನು ಕಲ್ಯಾಣಿಯ ಬಂದೀಖಾನೆಯಲ್ಲಿ ಇಡುವುದಕ್ಕಿಂತ ಮುಂಚೆ ಸೆರೆಮನೆಯೊಳಗೆ ಇಬ್ಬರು ಅವನ ಅಂಗಾಂಗಗಳನ್ನೆಲ್ಲಾ ಶೋಧಿಸಿದರು. ಗೋಸಾಯಿಯು ಅವರನ್ನು ತನ್ನ ತಲೆಯನ್ನು ಮಾತ್ರ ಶೋಧಿಸಬೇಡಿರೆಂದು ಹೇಳಿದುದು ಕಾವಲುಗಾರರಿಗೆ ಅನುಮಾನ ಹುಟ್ಟಿಸಿತು. ಅವರು ಬಲವಂತದಿಂದ ಅವನ ಪೇಟವನ್ನು ಕಿತ್ತು ಹುಡುಕಿದರು. ಅವನ ಜುಟ್ಟಿನೊಳಗೆ ಒಂದು ಚೀಲವಿದ್ದಿತು. ಅದರ ಬಾಯಿ ಬಿಗಿದಿದ್ದಿತು. ಅದರೊಳಗೇನಿದೆಯೆಂಬುದನ್ನು ನೋಡಲು ಕಾವಲುಗಾರರು ಬಿಚ್ಚಿದರು. ಅದರೊಳಗಿನಿಂದ ಸುಮಾರು ಆರು ಅಡಿ ಉದ್ದವಿದ್ದ ಕಾಳಸರ್ಪವು ಬುಸುಗುಟ್ಟಿಕೊಂಡು ಮೇಲಕ್ಕೆ ನೆಗೆದು ಹೆಡೆ ಬಿಚ್ಚಿತು. ಕಾವಲುಗಾರರು ಹೆದರಿಕೊಂಡು ಓಡಿದರು. ಬಂದೀಖಾನೆಯೆಲ್ಲೆಲ್ಲಾ ಗುಲ್ಲೆಬ್ಬಿತು. ಕೊನೆಗೆ ಮೂಮಲತ್‌ದಾರರು ಆ ಗೋಸಾಯಿಯಿದ್ದ ಕೊಠಡಿಗೆ ಹೋಗಿ ಅಲ್ಲಿ ನಡೆದುದನ್ನೆಲ್ಲಾ ಕೇಳಿ ತಿಳಿದುಕೊಂಡರು. ಮೂಮಲತ್‌ದಾರರು ಆ ಗೋಸಾಯಿಯನ್ನು ತನ್ನ ಮುದ್ದು ಮೃಗವನ್ನು ಹಿಡಿದು ಕಟ್ಟಿಡುವಂತೆ ಪ್ರಾರ್ಥಿಸಿದರು. ಅವನು ನಿರ್ಭೀತಿಯಿಂದ ಅದನ್ನು ಹಿಡಿದು ಅದೇ ಚೀಲದಲ್ಲಿ ಹಾಕಿ ಅದರ ಬಾಯಿ ಕಟ್ಟಿದನು. ಮೂಮಲತ್‌ದಾರರು ಆ ಚೀಲವನ್ನು ಅಲ್ಲೇ ಒಂದು ಪೆಟ್ಟಿಗೆಯಲ್ಲಿರಿಸಿ ಬೀಗ ಹಾಕಿಸಿ ಆ ಬೀಗದ ಕೈಯನ್ನು ತಮ್ಮ ಬಳಿಯಲ್ಲಿಟ್ಟುಕೊಂಡಿದ್ದರು. ಗೋಸಾಯಿಯು ಶಿಕ್ಷೆಯ ಅವಧಿ ಮುಗಿದ ನಂತರ ಮೂಮಲತ್‌ದಾರರು ಅವನಿಗೆ ಆ ನಾಗರಹಾವನ್ನು ವಾಪಸು ಕೊಡಿಸಿ, ಅದನ್ನೇತಕ್ಕೆ ಆ ರೀತಿ ಬಿಗಿದಿಟ್ಟುಕೊಂಡಿರುವೆಯೆಂದು ಕೇಳಿದರು. ಅದಕ್ಕೆ ಅವನು, 'ಕೆಲವರು ಆಫೀಮನ್ನು ಸೇವಿಸುವಂತೆಯೇ ಬಚನಾಗ್' ಎಂಬ ವಿಷವನ್ನು ಸೇವಿಸುವುದು ನನಗೆ ರೂಢಿಯಾಗಿ ಹೋಗಿದೆ. ಈ ಪಾಷಾಣವು ನೀರಿನ ಬಳಿ ಬೆಳೆಯುವ ಒಂದು ಬಳ್ಳಿಯಲ್ಲಿ ಸಿಕ್ಕುವುದು. ಅದು ಸಿಕ್ಕದಿದ್ದಾಗ, ಈ ನಾಗರ ಹಾವಿನ ವಿಷವನ್ನೇ ನಾನು ಸೇವಿಸುವೆನು' ಎಂದು ಹೇಳಿದನು. ಅದು ಹೇಗೆಂದು ಅವರು ಮತ್ತೆ ಕೇಳಲು, ಅದಕ್ಕೆ ಉತ್ತರವಾಗಿ ಗೋಸಾಯಿಯು ಆ ಹಾವಿನ ಚೀಲವನ್ನು ಬಿಚ್ಚಿ ಹಾವನ್ನು ಎತ್ತಿ ಹಿಡಿದುಕೊಂಡು ತನ್ನ ನಾಲಿಗೆಯನ್ನು ಮುಂದಕ್ಕೆ ನೀಡಿದನು, ಹಾವು ಕೂಡಲೆ ಅವನ ನಾಲಿಗೆಯನ್ನು ಕಚ್ಚಿತು. ಆವನು ಅದನ್ನು ಮತ್ತೆ ಚೀಲದೊಳಗಿಟ್ಟುಕೊಂಡು ಮೂಮಲತ್‌ದಾರರಿಗೆ ಸಲಾಂ ಮಾಡಿ ಮುಂದೆ ಹೊರಟು ಹೋದನು.

ವಿದೇಶ.

ಸ್ವೀಡನಿನಿಂದ ಸಾವಿರಾರು ಮಂದಿ ಸ್ವಯಂ ಸೇವಕರು ಫಿನ್‌ಲೆಂಡಿಗೆ ಬಂದಿದ್ದಾರೆಂದು ವರ್ತಮಾನ. ಸ್ವೀಡಿಷ್ ಆಂಬುಲೆನ್ಸ್ ರಣರಂಗದಲ್ಲಿ ಈಗಾಗಲೇ ಸಜ್ಜಾಗಿ ನಿಂತಿದೆ.

ಯುದ್ಧ ಆರಂಭವಾದ ಲಾಗಾಯಿತು ಬ್ರಿಟನಿಗೆ ಬಂದು ತಲಪಿರುವ ಪ್ರಥಮ ಆಸ್ಟ್ರೇಲಿಯನ್ ಪಡೆ ಎಂದರೆ ತಾ. 26ರ ಬೆಳಿಗ್ಗೆ ದಕ್ಷಿಣ ತೀರ ಪ್ರದೇಶದಲ್ಲಿ ಬಂದಿಳಿದ ಪಡೆ. ಈ ಪಡೆಯವರೆಲ್ಲರೂ ಆಸ್ಟ್ರೇಲಿಯನ್ ವಿಮಾನ ಪಡೆಯವರು.

ಅಮೇರಿಕಾದಲ್ಲಿ ಇಟೆಲಿಯ ರಾಯಭಾರಿಯು ಅಲ್ಲಿಯ ಅಧ್ಯಕ್ಷ ಮಿ. ರೂಸ್ವೆಲ್ಟರನ್ನು ಕಂಡು ಸಂಭಾಷಿಸಿ, ರಷ್ಯವು ಹಲವು ಬಾಲ್ಕನ್ ರಾಷ್ಟ್ರಗಳನ್ನು ಮುತ್ತುವುದಾದರೆ ಇಟೆಲಿಯು ಅದನ್ನು ತಡೆಯಲಿಕ್ಕೆ ತನ್ನ ಸೈನ್ಯವನ್ನು ಕಳುಹಿಸಿಕೊಡುವುದೆಂದು ಹೇಳಿದ್ದಾನೆ.

ಹಿಟ್ಲರನ ಹುಚ್ಚು ಮಿತಿಮೀರಿ ಆದೇ ಹುಚ್ಚಿನ ದೆಸೆಯಿಂದಾಗಿ ಹಿಟ್ಲರನ ನೂನಸಿಕ ಆರೋಗ್ಯವು ಕೆಡುವುದೆಂದೂ, ಆವನು ಸ್ಥೈರ್ಯ ಕೆಟ್ಟು ಆತ್ಮಘಾತ ಮಾಡಿಕೊಂಡು ಸಾಯುವನೆಂದೂ ಹದಿನೂರು ಮಂದಿ ಮನೋ ವಿಜ್ಞಾನಿಗಳು ಹೇಳಿರುವರು.

ಮುಂದಿನ ವರ್ಷ ಜಪಾನ್ ಸರ್ಕಾರದವರು ತಮ್ಮ ನೌಕಾಬಲವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಆರು ಕೋಟಿ ಪೌಂಡುಗಳನ್ನು ಖರ್ಚು ಮಾಡತಕ್ಕುದೆಂದು ನಿಶ್ಚಯಿಸಿದ್ದಾರೆ ಇದು ಈ ಸಾಲಿನಲ್ಲಿ ಅವರು ಅದೇ ಬಾಬಿಗಾಗಿ ಖರ್ಚು ಮಾಡಿದುದಕ್ಕಿಂತಲೂ ಒಂದು ಕೋಟಿ ಇಪ್ಪತ್ತು ಲಕ್ಷ ಪೌಂಡುಗಳಷ್ಟು ಹೆಚ್ಚಾಗಿದೆ.

ಯುದ್ಧದ ಜ್ವಾಲೆಗೆ ಸಿಕ್ಕಿರುವ ದೇಶಗಳಲ್ಲಿ ಲಕ್ಷಾಂತರ ಮಂದಿ ಪ್ರಜೆಗಳು ವಿಷವಾಯುವಿನ ಭೀತಿಯನ್ನು ತಪ್ಪಿಸಿಕೊಂಡು ಪ್ರಾಣ ಉಳಿಸಿಕೊಳ್ಳುವುದಕ್ಕಾಗಿ ಮುಖವಾಡಗಳನ್ನು (ಗ್ಯಾಸ್ ಮಾಸ್ಕ್) ಕೊಂಡಿಟ್ಟುಕೊಂಡಿರುತ್ತಾರೆ. ಅಷ್ಟೇ ಅಲ್ಲ; ಅವರು ತಮ್ಮ ಮುದ್ದಿನ ಪ್ರಾಣಿಗಳಿಗೂ ಸಹ ವಿಷವಾಯುವನ್ನು ಶುದ್ಧಿಗೊಳಿಸುವ ಮುಖವಾಡಗಳನ್ನು ಮಾಡಿಸಿಕೊಂಡಿರುತ್ತಾರೆ. ಆದರೆ ಯುದ್ಧ ಭೀತಿ ಇಲ್ಲದ ಶಾಂತಿ ನೆಲೆಸಿರುವ ರಾಜ್ಯವೊಂದರಲ್ಲಿ ಅತ್ಯಂತ ವಿಸ್ಮಯಕರವಾದ ಮತ್ತೊಂದು ಮುಖವಾಡವು ಸಿದ್ಧವಾಗುತ್ತಿದೆ. ಅದು ಮನಷ್ಯರಿಗಲ್ಲ. ಜ್ವಾಲಾಮುಖಿಗೆ. ಮಧ್ಯ ಅಮೇರಿಕದಲ್ಲಿರುವ ನಿಕರಾಗ್ವೆ ಪ್ರಜಾಧಿಪತ್ಯಕ್ಕೆ ಸೇರಿದ ಮಸಾಯಿ ಎಂಬ ಊರಿನ ಬಳಿ ಇರುವ ಜ್ವಾಲಾಮುಖಿಯಿಂದ ಹೊರಡುವ ವಿಷವಾಯುವಿನ ದೆಸೆಯಿಂದ ಆ ಸುತ್ತು ಮುತ್ತಲಿನ ಪ್ರದೇಶದಲ್ಲಿ ಬೆಳೆಸ ಧಾನ್ಯಗಳೆಲ್ಲವೂ ನಾಶವಾಗಿ ಜನರಿಗೆ ಕಷ್ಟ ನಷ್ಟಗಳಾಗುತ್ತಿವೆ. ಸ್ಥಳೀಕ ರಸಾಯಿನ ಪಂಡಿತರು ಅಲ್ಲಿ ಜನರಿಗೆ 'ಗಾಸ್‌ಮಾಸ್ಕ್'ಗಳನ್ನು ಮಾಡಿಸಿ ಕೊಡುವದರ ಬದಲು ಆ ಜ್ವಾಲಾಮುಖಿಯ ಬಾಯಿಗೇ ವಿಷ ಅನಿಲವನ್ನು ಶುದ್ಧಿ ಮಾಡುವ ಮುಖವಾಡವನ್ನು ಹಾಕುವ ಪ್ರಯತ್ನ ಮಾಡಿರುತ್ತಾರೆ. ಆ ಮುಖವಾಡದಲ್ಲಿ ವಾಯುವನ್ನು ಶುದ್ಧಿ ಮಾಡುವ ರಸಾಯನಿಕ ವಸ್ತುಗಳನ್ನು ಇಡುತ್ತಾರೆ. ಆ ವಸ್ತುಗಳು ವಿಷ ವಾಯುವನ್ನು ಹೀರಿಕೊಂಡು ಮುಂದೆ ಅಪ್ರಯೋಜನವಾದಾಗ ಅವುಗಳನ್ನು ಬದಲಾಯಿಸಿ ಅಪ್ರಯೋಜನವಾದ ಆ ವಸ್ತುಗಳನ್ನು ಗೊಬ್ಬರವಾಗಿ ಉಪಯೋಗಿಸುತ್ತಾರೆ.

ಅಹಿಂಸಾ ಕ್ರಾಂತಿ.

ಆಚಾರ್ಯ ಕೃಪಾಲಿನಿಯವರ ಲೇಖನಾಧಾರದಿಂದ.

ಲೇಖಾಂಕ ೨.

ಮಾನವ ಜೀವನದಲ್ಲಿ ಕ್ರಮಶಃ ಅಹಿಂಸೆಯು ಮುಂದರಿಯುತ್ತಿದೆ. ಕುಟುಂಬದಲ್ಲಿದ್ದ ಯಜಮಾನನ ನಿರಂಕುಶಾಧಿಕಾರ, ಮದುವೆ ಮುಂಜಿಗಳಲ್ಲಿದ್ದ ಬಲಾತ್ಕಾರ, ಮಕ್ಕಳ ಪೋಷಣೆಯಲ್ಲಿದ್ದ ಅಂಧಕಾರ, ಮತ ವಿಚಾರಗಳಲ್ಲಿದ್ದ ಅಪಪ್ರಚಾರ, ವ್ಯಾಪಾರೋದ್ಯಮಗಳಲ್ಲಿ ಮೂರ್ತಿಮತ್ತಾಗಿದ್ದ ಅನಾಚಾರ ಇವೆಲ್ಲ ಮಾಯವಾಗಿ ಕುಟುಂಬ ಜೀವನದಲ್ಲಿ ಐಕ್ಯತೆ, ಮದುವೆ ಮುಂಜಿಗಳಲ್ಲಿ ಸ್ವಾತಂತ್ರ್ಯತೆ, ಮಕ್ಕಳ ಪೋಷಣೆಯಲ್ಲಿ ಮುಂಜಾಗ್ರತೆ, ಮತ ವಿಚಾರಗಳಲ್ಲಿ ಧರ್ಮ ಶೀಲತೆ, ವ್ಯಾಪಾರೋದ್ಯಮಗಳಲ್ಲಿ ಸತ್ಯತೆಯು ನೆಲಸುತ್ತಿವೆ. ಹೀಗೆ ಮಾನವ ಜೀವನವು ಒಂದು ವಿಧದಲ್ಲಿ ಪ್ರಗತಿ ಪಥದಲ್ಲಿ ಕ್ರಮಿಸುತ್ತಿದೆ.

ಮಾನವ ವ್ಯಕ್ತಿಯು ನಾಗರೀಕತೆಯ ಮಾರ್ಗದಲ್ಲಿ ಹೇಗೆ ಮುಂದರಿದನು? ಹಾಗೆ ಮುಂದರಿಯಲು ಯಾವ ಕ್ರಮಗಳನ್ನು ಕೈಗೊಂಡನು? ಈ ವಿಚಾರಗಳನ್ನು ವಿವೇಚಿಸಿದರೆ ಮಾನವ ಜೀವಿಯು ಪ್ರಾಣಿವರ್ಗಗಳು ಇಂದಿರುವಂತೆ ಪ್ರಕೃತಿನಿಯಮಕ್ಕೊಳಪಟ್ಟು ಜೀವಿಸುತ್ತಿದ್ದ ಕಾಲ ಒಂದಿತ್ತು. ಅದು ಪರಸ್ಪರರೊಡನೆ ಅಂತ್ಯವಿಲ್ಲದ ಯಾದವೀಕಹಲದ ಕಾಲವಾಗಿತ್ತು. ಮನು ಆಗಷ್ಯ ಸ್ವಭಾವವು ಪ್ರಾಣಿಸ್ವಭಾವಕ್ಕಿಂಥ ಮುಂದರಿದಿರಲಿಲ್ಲ. ಶರೀರದಾರ್ಢ್ಯವುಳ್ಳವನಿಗೇ ಗೆಲುವು ಎಂಬ ತತ್ವವು ದಿನಚರ್ಯದ ರೂಢಿಯಾಗಿತ್ತು. ಆದರೆ ಈ ಸ್ಥಿತಿಯು ಹಾಗೆಯೇ ನಿರಾತಂಕವಾಗಿ ಮುಂದರಿಯುವುದು ಅಸಾಧ್ಯವಾಯಿತು. ಆ ಖಾನೂನೇ ಜಾರಿಯಲ್ಲಿದ್ದ ಪಕ್ಷ ಇಂದು ಮಾನವ ಜನಾಂಗವು ಕ್ಷಯ ಹೊಂದಿ ಎಲ್ಲೋ ಒಂದೆರಡು ಬಲಾಢ್ಯ ಪಂಗಡಗಳು ಉಳಿಯುವಂತಾಗುತ್ತಿತ್ತು. ಮಾನವ ಜನಾಂಗವು ಈ ಪರಸ್ಪರ ಕಲಹವನ್ನು ತಪ್ಪಿಸುವ ಒಂದು ವಿಧಾನವನ್ನು ಕಂಡುಕೊಂಡದ್ದೇ ಮಾನವ ಕೋಟಿಯ ಇರುವಿಕೆಗೆ ಕಾರಣ. ಪರಸ್ಪರರಲ್ಲಿದ್ದ ಹಿಂಸೆ, ಜಗಳ ವೈಶಮ್ಯಗಳನ್ನು ಹತೋಟಿಯಲ್ಲಿಟ್ಟ ಒಂದು ಶಕ್ತಿಯು ಉದ್ಭವಿಸಿದ್ದೇ ಜನತೆಯ ಮುನ್ನಡೆಗೆ ಸಹಕಾರಿಯಾಯಿತು. ಕುಟುಂಬದಲ್ಲಿ ಗಂಡ ಹೆಂಡತಿಯರನ್ನೂ, ತಂದೆ ಮಕ್ಕಳನ್ನು ಪಾರ್ಟಿ ಪಂಗಡಗಳನ್ನು, ಅಲ್ಲ ಜನಾಂಗಗಳನ್ನೂ ಸೌಹಾರ್ದದಿಂದಿರಲು ಪ್ರೇರೇಪಿಸಿದ ಅಶಕ್ತಿಯೂವದದು? ಇದೇ ಅಹಿಂಸಾ, ಅಥವಾ ಶಾಂತಿ ಮತ್ತು ಸಹಕಾರಕ್ಕೆ ಮಾರ್ಗದರ್ಶಿಯೂದ ಪ್ರೇವದ ಖಾನೂನು. ಮನುಷ್ಯನಿಗೆ ಸಂಬಂಧಿಸಿದ ಸಂಘ ಸಂಸ್ಥೆಗಳೇ ಅಲ್ಲ, ಎಲ್ಲಾ ಮಾನವ ವರ್ಗವೂ ಹಿಂಸೆಯಿಂದ ಅಹಿಂಸಾಪತಕ್ಕೆ ಕ್ರಮಕ್ರಮವಾಗಿ ಬಂದಿರುವರು. ಈ ವಿಚಾರ ಖಚಿತಪಡಿಸಲು ಕೆಲವು ಉದಾಹರಣೆಗಳನ್ನು ತೆಗೆಮುಕೊಳ್ಳೋಣ.

ಕುಟುಂಬ.

ಮಾನವ ಜೀವನವು ಸುಗಮವಾಗಿ ನಡೆಯುವಂತೆ ಸಹಕರಿಸಿದ ಪುರಾತನ ಮತ್ತು ಪ್ರಥಮ ಸಂಸ್ಥೆಯೆಂದರೆ ಕುಟುಂಬ. ಅದರ ಪ್ರತಿಯೊಂದು ಬಾಂಧವ್ಯವೂ ಕ್ರಮಶಃ ಹಿಂಸೆಯನ್ನು ತೊರೆದು ಅಹಿಂಸಾ ಪಥದಲ್ಲಿ ಕ್ರಮಿಸುತ್ತಿರುವದು ಕಂಡು ಬರುತ್ತೆ. ಕುಟುಂಬದ ಯಜಮಾನನಿಗೆ ಆದರೊಳಗಿನ ಎಲ್ಲಾ ಸ್ತ್ರೀಪುರುಷರ ಮೇಲೆ ಪೂರ್ತಿ ಅಧಿಕಾರವಿತ್ತು. ಹೆಂಡತಿ ಮತ್ತು ಮಕ್ಕಳು ಗಂಡ ಮತ್ತು ತಂದೆಯ ಆಸ್ತಿ ಆಗಿದ್ದರು. ಆತನಿಗೆ ಅವರ ಅವಯವ ಹಾಗೂ ಜೀವದ ಮೇಲೆ ಹಿಡಿತವಿತ್ತು. ಈ ಅಧಿಕಾರವನ್ನು ಅನಾದಿಯಲ್ಲಿ ಅಂದರೆ ಕುಟುಂಬದ ಶೈಶವದಲ್ಲಿ ಆತನು ಉಪಯೋಗಿಸಿ ತನ್ನ ಇತರ ವಸ್ತುಗಳನ್ನು ಮಾರಿದಂತೆ ಯಾ ಒತ್ತೆ ಇಟ್ಟಂತೆ ಹೆಂಡತಿ ಮಕ್ಕಳನ್ನೂ ಉಪಯೋಗಿಸಲು ಸಾಧ್ಯವಿತ್ತು. ಕ್ರಮೇಣ ಜ್ಞಾನಾಭಿವೃದ್ಧಿಯಾದಂತೆ ತನ್ನ ಕೈಕೆಳಗಿನ ಕುಟುಂಬಿಕರು ತನ್ನ ಆಜ್ಞೆಗೆ ವ್ಯತಿರಿಕ್ತ ನಡೆದರೆ ಅವರನ್ನು ಶಿಕ್ಷಿಸಿ ತನ್ನ ಹತೋಟಿಗೆ ತರುವಂತಾಯಿತು. ತನ್ನ ಅಧೀನದ ಕುಟುಂಬಿಕರನ್ನು ಶಿಕ್ಷಿಸುವಾಗ ಸರಕಾರಕ್ಕಾಗಲೀ, ಯಾ ಇತರ ಯಾವ ಸಂಸ್ಥೆಗಾಗಲೀ ಯಜಮಾನನನ್ನು ಪ್ರಶ್ನಿಸುವ ಅಧಿಕಾರವಿರಲಿಲ್ಲ. ಇಂದೂ ಸಹ ಕುಟುಂಬದ ಯಜಮಾನನು ತನ್ನಧೀನದಲ್ಲಿರುವ ಕುಟುಂಬಿಕರಿಗೆ ಅವರ ತಪ್ಪಿಗನುಸಾರ ಶಿಕ್ಷೆ ವಿಧಿಸುವದು ರೂಢಿಯಲ್ಲಿದೆ. ಆದರೆ ವಾಸ್ತವವಾಗಿ ಇಂದು ನಾಗರೀಕತೆಯನ್ನು ಹೊಂದಿರುವ ಪ್ರತಿಯೊಂದು ರಾಷ್ಟ್ರದಲ್ಲಿ ಕುಟುಂಬದ ಪ್ರತಿಯೊಬ್ಬ ಮೆಂಬರನೂ ಸ್ವತಂತ್ರನಿರುವನು. ಕುಟುಂಬದಲ್ಲಿ ನಡೆಯುವ ಕ್ರೌರ್ಯಯೂ ಮತ್ತಾವ ಅನಾಚಾರವನ್ನೂ ವಿಚಾರಿಸಿ ಶಿಕ್ಷಿಸುವ ಅಧಿಕಾರವು ಇಂದು ಕುಟುಂಬದ ಯಜಮಾನನಿಂದ ಸರಕಾರಕ್ಕೆ ಹೋಗಿ ಬಿಟ್ಟಿದೆ.

ಮದುವೆ.

ಈ ಸಂಸ್ಥೆಯೂದರೂ ಅನೇಕ ಆಶ್ಚರ್ಯಕರ ಬದಲಾವಣೆಯನ್ನು ಹೊಂದಿದೆ. ಪುರಾತನ ಕಾಲದಲ್ಲಿ ಕದ್ದು ತೆಗೆದುಕೊಂಡು ಹೋಗಿ ಮದುವೆಯಾಗುವದು, ಬಲಾತ್ಕಾರದ ಶಕ್ತಿ ಪ್ರಯೋಗದಿಂದ ಮದುವೆಯಾಗುವದು, ಇವೇ ಮೊದಲಾದುವು ನ್ಯಾಯರೀತಿಯ ಮದುವೆಯೆಂದು ಪರಿಗಣಿಸಲ್ಪಡುತ್ತಿದ್ದವು. ಈ ಆಶ್ಚರ್ಯಕರ ರೀತಿಯಿಂದ ಸಿಕ್ಕಿ ಮದುವೆಯೂದ ಹುಡುಗಿಯರು ಗಂಡನ ಕ್ರೌರ್ಯಕ್ಕೆ ತುತ್ತಾಗಿ ನರಳುತ್ತಿದ್ದರು. ಆದರೆ ಇಂದು ಮದುವೆಯ ವ್ಯಾಪಾರವು ಸ್ವತಂತ್ರವಾಗಿರುವ ಹುಡುಗ ಹುಡುಗಿಯರ ಮಾನಸಿಕ ಇಚ್ಛೆಯಂತೆ ನಡೆಯುವಂತಾಗಿದೆ. ಈ ಸ್ಥಿತಿಗೆ ಪೂರ್ಣವಾಗಿ ಇನ್ನೂ ತಲಪಿಲ್ಲ; ತಂದೆ ತಾಯರ ಹಿಂಸೆ, ಜಾತಿ, ಮತ, ಬಣ್ಣವೆಂಬ ಬೇಧ, ಇವು ಇಂದೂ ಸ್ವತಂತ್ರೀಯುವಕ ಯುವತಿಯರ ಇಚ್ಛೆಗೆ ಅತಂಕವನ್ನುಂಟುಮಾಡುತ್ತಿವೆ. ಇಂದು ನಾಗರೀಕತೆಯಲ್ಲಿ ನುಂದರಿದಿರುವ ದೇಶಗಳಲ್ಲಿ ಮದುವೆಯೆಂಬುದು ಪ್ರತಿಯೊಬ್ಬನ ಸ್ವತಂತ್ರ ವಿಚಾರವಾಗಿರುವದಲ್ಲದೆ, ವರಾನ್ವೇಷಣೆಯ ಕಾಲದಲ್ಲಿ ಪರಸ್ಪರರ ಕುಂದುಕೊರತೆಗಳನ್ನು ಬಯಲಿಗೆಳೆದು ಹೀಯಾಳಿಸುವ ಕ್ರೂರನೀತಿಯು ಮಾಯವಾಗಿ ಪರಸ್ಪರರ ಸ್ನೇಹದ ಪರೀಕ್ಷೆಯೇ ಪ್ರಧಾನವಾಗಿದೆ. ಮೋಹವನ್ನುಂಟುಮಾಡಲು ಪ್ರಯತ್ನಿಸುವ ಒಣಪ್ರದರ್ಶನಗಳೂ, ಅಭಿನಯಗಳೂ ಇಂದು ಅವಮರ್ಯಾದೆಯ ಚಿನ್ಹೆಗಳೆಂದು ಭಾವಿಸಲ್ಪಟ್ಟಿವೆ. ಮದುವೆಯಾದ ನಂತರವೂ ದಂಪತಿಗಳ ಧ್ಯೇಯವಾದರೂ ಪರಸ್ಪರರ ಸಮಾನ ಸ್ವಾತಂತ್ರ್ಯವಾಗಿದೆ. ಆರ್ಥಿಕ ತೊಂದರೆಯು ಇಂದು ಪ್ರೇಮಕ್ಕೆ ಅಡ್ಡಿ ತರುವಂತಿಲ್ಲ. ಮಾನವ ಜನಾಂಗವು ಅಹಿಂಸಾಪಥದಲ್ಲಿ ಬಹು ಮುಂದೆ ನಡೆದಿದೆ. ಗಂಡನು ಮನೆಬಿಟ್ಟು ಅನೇಕ ದಿನಗಳು ಕಳೆದು ಬಂದ ನಂತರವೇ ಹೆಂಡತಿಗೆ ತನ್ನ ಸ್ವಾಭಾವಿಕ ಪ್ರಹರಗಳನ್ನು ಕೊಡದಿದ್ದರೆ ತಮ್ಮ ಬಾಂಧವ್ಯದಲ್ಲಿ ಏನೋ ರೀತಿಯ ಅನಾಸಕ್ತಿ ಉದ್ಭವಿಸಿದೆಯೆಂದು ತಿಳಿಯುತ್ತಿದ್ದ ಆ ಕಾಲವೆಲ್ಲಿ! ಪುರಾತನ ಆ ರೀತಿಯ ಭಾಂಧವ್ಯವು ದಂಪತಿಗಳಲ್ಲಿ ಪರಸ್ಪರ ಪ್ರೀತಿಯನ್ನು ಪ್ರೋತ್ಸಾಹಿಸುತಿತ್ತೆಂದು ಇಂದಿನ ಯಾವಳೊಬ್ಬ ಪತ್ನಿಯಾದರೂ ಭಾವಿಸಿಯಾಳೆ? ಪತ್ನಿಯ ಮೇಲೆ ಗಂಡನು ಪೂಡುತ್ತಿದ್ದ ಅಂದಿನ ನಿರಂಕುಶ ವರ್ತನೆಗಳಿಗೂ, ಇಂದು ಪತಿಯಂತೆಯೇ ಸ್ವಾತಂತ್ರ ವೇದಿಕೆಯಲ್ಲಿ ನಲಿದಾಡುತ್ತಿರುವ ರೀತಿಗೂ ಸಂಬಂಧವೆಲ್ಲಿ?

ಮಕ್ಕಳ ಪೋಷಣೆ.

ನಮ್ಮ ಪೂರ್ವಿಕರು ಮಕ್ಕಳಿಗೆ ವಿದ್ಯೆ ಬುದ್ದಿಗಳನ್ನು ಗುದ್ದು ಹೊಡೆತಗಳಿಲ್ಲದೆ ಕಲಿಸುವದು ಅಸಾಧ್ಯವೆಂದು ಖಂಡಿತಾ ಭಾವಿಸಿದ್ದವು. 'ದೊಣ್ಣೆ ಬಿಟ್ಟೀಯೆ? ಹುಡುಗ ಕೆಟ್ಟಾನು' ಎಂಬ ನಾಣ್ನುಡಿಯೇ ವಿದ್ಯೆಯ ಅಡಿಗಲ್ಲಾಗಿತ್ತು. ಇಂದಾದರೂ ಜನಾಂಗದ ಮೇಲಿರುವ ಆದರ ಹಿಡಿತವು ಪೂರ್ಣ ಮಾಯವಾಗಿಲ್ಲ. ಆದರೆ ಮುಂದುವರಿದಂತೆ ಕೋಲು ದೊಣ್ಣೆಗಳು ಪ್ರಾಣಿಗಳನ್ನು ಕೂಡಾ, ತರಬೇತು ಮಾಡುವ ಸಾಧನಗಳಲ್ಲ ಎಂಬುದು ಖಚಿತವಾಗುತ್ತಿದೆ. ಮಕ್ಕಳು ದಿನೇ ದಿನೇ ಸ್ವತಂತ್ರರಾಗುತ್ತಿರುವರು. ಅವರ ಜೀವನವು ಪ್ರಗತಿದಾಯಕವೂ, ಆಹ್ಲಾದಕರವೂ ಆಗುತ್ತಾ ಬಂದಿವೆ. ಅವರ ವಿಚಾರ ಹೆಚ್ಚಿನ ಮುಪುವರ್ಜಿತೆಯು ತೆಗೆದು ಕೊಳ್ಳಲ್ಪಡುತ್ತಿದೆ.

ಕುತೂಹಲದಿಂದ ಪ್ರಶ್ನೆಗಳ ಸುರಿಮಳೆ ಸುರಿಸುವ ಮಕ್ಕಳಿಗೆ ಕೆನ್ನೆಯ ಮೇಲೆ ಭಾರಿಸಿ ಉತ್ತರ ಕೊಡುವ ಕಾಲ ಬಂದಿತ್ತು. ಅದು ಇನ್ನಾದರೂ ಅನೇಕ ಪುನೆಗಳಲ್ಲಿ ಮಾಯವಾಗಿಲ್ಲ. ಆದರೆ ಉತ್ತಮ ಶಾಲೆಗಳಲ್ಲಿ, ನಾಗರೀಕ ಹಾಗೂ ಸುಧಾರಿಸಿದ ಕುಟುಂಬಗಳಲ್ಲಿ, ಕೇವಲ ದೊಣ್ಣೆಯೇ ಅಲ್ಲ; ಮಕ್ಕಳ ಪಾಲನೆಯಲ್ಲಿ ಸುಳ್ಳು, ಮೋಸ ಇವುಗಳ ಪ್ರಯೋಗವೇ ಮಾಯವಾಗುತ್ತಾ ಬರುತ್ತಿವೆ. ಪ್ರತಿಯೊಂದು ನಾಗರೀಕ ಮಗುವಿನ ಮನಶಾಸ್ತ್ರವು ಬದಲಾವಣೆ ಹೊಂದಿದೆ. ಆತನ ಪೂರ್ವಿಕರು ಕೋಲಿನ ಸಹಾಯದಿಂದ ವಿದ್ಯೆ, ಜ್ಞಾನವನ್ನು ಪಡೆದರಾದರೆ ಇಂದಿನ ಬಾಲಕರು ಅದನ್ನು ನಿರಾಕರಿಸುವರು.

ಮತ.

ಮತವು ಬೆಂಕಿ, ಕತ್ತಿಗಳ ಪ್ರಯೋಗದಿಂದ, ಮನುಷ್ಯ ಮತ್ತು ಪ್ರಾಣಿವರ್ಗಗಳ ವಧೆಯಿಂದ, ಬಲಾತ್ಕಾರದ ಧರ್ಮಾಂತರಗಳಿಂದ ಮತ್ತು ಕಾಲೋಚಿತ ಹತ್ಯಾಕಾಂಡಗಳಿಂದ ಪ್ರಾರಂಭವಾಯಿತು. ಮತ ಪ್ರಚಾರದ ಹೆಸರಿನಲ್ಲಿ ಘೋರ ಯುದ್ಧಗಳು ನಡೆದವು. ಆದರೆ ಇಂದು ಅತೀ ಹಿಂದುಳಿದಿರುವ ಪಂಗಡಗಳಲ್ಲಲ್ಲದೆ, ನಂಬಿಕೆಯನ್ನು ಹೋಗಲಾಡಿಸುವ, ಹೃದಯ ಕಾಂಕ್ಷೆಯನ್ನು ಮೂರ್ಪಡಿಸುವ ಕಾರ್ಯವು ಮೋಸ ಅಥವ ಹಿಂಸೆಗಳಿಂದ ಸಾಧ್ಯವಲ್ಲವೆಂಬುದು ಧೃಢವಾಗಿದೆ. ಆದ್ದರಿಂದ ನಯವಾದ ರೀತಿಯ ಲಂಚ, ಸಾಮಾಜಿಕ ಆಚರಣೆ ಮಿಥ್ಯಾಚರ್ಯೆ ಇವು ಮತ ಪ್ರಚಾರಿಗಳ ಆಯುಧಗಳಾಗಿ ಪರಿಣಮಿಸಿದವು. ಈ ಮತಪ್ರವಾಧಿಗಳು ಮಾನವ ಹಿತಸಾಧನೆಯ ದೃಷ್ಟಿಯಿಂದ ಈ ಆಧ್ಯಾತ್ಮಿಕ ಹಾದಿಯನ್ನು ಉಪಯೋಗಿಸದೆ ಪರಕೀಯರನ್ನು ತಮ್ಮ ಮತಗಳಿಗೆ ಮತಾಂತರಿಸುವ ಇವೇ ಮೊದಲಾದ ಕ್ಷುಲ್ಲಕ ಕಾರಣಗಳನ್ನು ಕೈಕೊಂಡ ಪ್ರಯುಕ್ತ ಅವರಿಗೆ ಇಂದು ಸಮಾಜದಲ್ಲಿ ಗೌರವವು ಮಾಯವಾಗಿದೆ. ಇಂದು ಮತವೆಂಬುದು ಕೇವಲ ವ್ಯಕ್ತಿಯ ಸ್ವತಂತ್ರ ನಂಬಿಕೆಯೇ ಆಗಿದೆ. ಸತ್ಯಶೋಧನೆಯ ಬಗ್ಗೆ ಹೃದಯವನ್ನು ಬದಲಾಯಿಸುವದೇ ಇಂದಿನ ಮತಾಂತರವಾಗಿದೆ. ಇದಕ್ಕೆ ವ್ಯತಿರಿಕ್ತವಾದ ಎಲ್ಲಾ ಆಚರಣೆಗಳೂ ಇಂದು ಹಿಂಸೆಯೆಂದು ಪರಿಗಣಿಸಲ್ಪಡುತ್ತಿವೆ.

ವ್ಯಾಪಾರ.

ಕಳ್ಳತನ, ದರೋಡೆ, ಇವುಗಳೇ ವ್ಯಾಪಾರದ ಉಗಮಸ್ಥಾನ. ಕೆಲವೇ ವರ್ಷಗಳ ಪೂರ್ವದ ಚರಿತ್ರೆಯನ್ನು ನೋಡಿದರೆ ನಾಗರೀಕ ಪಾಶ್ಚಾತ್ಯ ದೇಶಗಳಲ್ಲಿ ವ್ಯಾಪಾರ ಸಂಸ್ಥೆಗಳೇರ್ಪಟ್ಟು ಸಮುದ್ರ ಮತ್ತು ನೆಲಗಳಲ್ಲಿ ದರೋಡೆ ಹಾಗೂ ಕಳ್ಳತನ ಮಾಡಲು ಆಯಾಯ ಸರಕಾರಗಳಿಂದ ಅನುಮತಿ ಪಡೆದದ್ದು ಕಂಡು ಬರುವದು. ಅಂದಿನ ವ್ಯಾಪಾರೋದ್ಯಮವೇ ಅದಾಗಿತ್ತು. ಇಂಗ್ಲೆಂಡಿನಲ್ಲಿ ರಾಣಿ ಎಲಿಜಬೆತರ ಕಾಲದಲ್ಲಿ ಸಮುದ್ರದರೋಡೆಯೇ ವ್ಯಾಪಾರದ ಹೆಗ್ಗುರುತ್ತಾಗಿತ್ತು. ನಿಗ್ರೋ ಜನರನ್ನು ಅವರ ಮನೆಗಳಿಂದ ಕದ್ದು ತಂದು ಮಾರಾಟ ಮಾಡುವದು ಒಂದು ವ್ಯಾಪಾರವೇ ಆಗಿತ್ತು. ಆದರೆ ಇಂದು ಇವೆ

ತಿರುವಣ್ಣಾಮಲೆಯ ಶ್ರೀ ರಮಣ ಮಹರ್ಷಿಗಳು.

- ಆತ್ಮ ಸಾಕ್ಷಾತ್ಕಾರವನ್ನು ಹೊಂದಿ ಜನ್ಮ ಸಾರ್ಥಕ ಮಾಡಿಕೊಂಡ ಮಹಾ ಮಹಿಮರು.
- ಭವಬಂಧನದಿಂದ ಬಿಗಿಯಲ್ಪಟ್ಟವರಿಗೆ ಮೋಕ್ಷದ ದಾರಿ ತೋರಿಸುವ ಗುರುವರ್ಯರು.

ಇದೇ ತಿಂಗಳ 27ನೇ ತಾರೀಕು ಶ್ರೀ ರಮಣ ಮಹರ್ಷಿಗಳು ಹುಟ್ಟಿದ ಪವಿತ್ರ ಜನ್ಮದಿನವಾಗಿದೆ. ಮಹರ್ಷಿಗಳು ತಮ್ಮ ಆರುವತ್ತೊಂದನೇ ವರ್ಷಕ್ಕೆ ಕಾಲಿಕ್ಕುವ ದಿನವದು. ಈ ದಿನದಲ್ಲಿ ಋಷಿವರ್ಯರ ಜನ್ಮೋತ್ಸವವು ಲಕ್ಷ ಲಕ್ಷಾಂತರ ಭಕ್ತ ಶ್ರೇಷ್ಠರಿಂದ ಆಚರಿಸಲ್ಪಟ್ಟಿತು. ಇಂಥಾ ಪರಮಪಾವನ ಅರುಣಾಚಲ ಯೋಗಿಗಳ ಕಥಾ ಶ್ರವಣವು ಭವಬಂಧನವನ್ನು ತೊಲಗಿಸುವದೆಂಬುವುದರಲ್ಲಿ ಸಂಶಯವಿಲ್ಲ.

ಬಾಲ್ಯ.

1879ನೇ ಡಿಶಂಬರ್ 30ರಲ್ಲಿ ಋಷಿವರ್ಯರು ಜನಿಸಿ ವೆಂಕಟರಮಣನೆಂಬ ಭಿದಾನದಿಂದ ಮೂದರಿ ಬಾಲ್ಯವನ್ನು ನಡಿಸಿದರು. ಪಾಠ ಪ್ರವಚನಗಳಿಗಿಂತ ಆಟೋಟಗಳಲ್ಲಿ ಹೆಚ್ಚಿನ ಸಂತುಷ್ಟಿ ಪಡೆದಿದ್ದರೂ ಎರಡರಿಂದಲೂ ಅವರು ತೃಪ್ತರಾಗದೆ ಇರುತ್ತಿದ್ದರು. ಅವರ ಹದಿನೇಳನೇ ವರ್ಷವು ಅವರಲ್ಲಿ ಒಂದು ವಿಶೇಷ ಬದಲಾವಣೆಯನ್ನು ಮಾಡಿತು. ಆ ದಿನದ ವಿವರಣೆಯನ್ನು ಸ್ವಾಮಿಯವರೇ ಈ ರೀತಿ ಹೇಳುತ್ತಾರೆ. 'ಮಧುರದಲ್ಲಿಯ ನನ್ನ ಚಿಕ್ಕಪ್ಪನ ಮನೆಯ ಹೊರಗಡೆ ನಾನೊಬ್ಬನೇ ಕೂತಿದ್ದೆನು. ನನಗೆ ಶರೀರದ ಅಸೌಖ್ಯವಾಗಲೀ ಮತ್ತೆ ಯಾವ ತೊಂದರೆಯಾಗಲೀ ಇರಲಿಲ್ಲ. ಕುಳಿತಿದ್ದಂತೆಯೇ ಸಾವಿನ ಹೆದರಿಕೆಯ ನನ್ನನ್ನು ಮುತ್ತಿತು. ನಾನು ಸಾಯುತ್ತಿರುವಂತೆಯೇ ನನಗೆ ಭಾಸವಾಯಿತು. ಕೂಡಲೇ ಮನಸಿನಲ್ಲಿ ಬೇರೊಂದು ಯೋಚನೆಯು ಹುಟ್ಟಿ ಸಾವು ಎಂದರೇನು? ಕೇವಲ ದೇಹಿಕ ಜಟುವಟಿಕೆಯ ಪರ್ಯವಸಾನವಲ್ಲವೇ? ದೇಹದ ಕಾರ್ಯಕಲಾಪ ನಿಂತರೂ 'ನಾನು' ಎಂಬ ಆತ್ಮನು ಇನ್ನೂ ಉಳಿದಿರುವನಲ್ಲವೇ? ಅಂದ ಮೇಲೆ ಅಂಥಾ ಆತ್ಮನಾದ ನನಗೆ ಸಾವೆಲ್ಲಿ? ಈ ರೀತಿಯ ವಿಚಾರ ತರಂಗಗಳು ಅನಾಯಸವಾಗಿ ನನ್ನ ಚಿತ್ತಿ ಬಿತ್ತಿಯಲ್ಲಿ ಮೊಳೆಯತೊಡಗಿದವು. ತಕ್ಷಣನೇ ಈ ಸಾವಿನ ಹೆದರಿಕೆಯು ಮಾಯವಾಗಿ 'ನಾನು' ಎಂಬ ವಸ್ತುವಿನ ಸುತ್ತು ವಿಚಾರ ಪ್ರವಾಹವು ಸುತ್ತತೊಡಗಿತು. ಅಂದಿನಿಂದ ನನ್ನಲ್ಲಿ ಐಹಿಕ ಜೀವನದಲ್ಲಿ ಅನಾಸಕ್ತಿಯುಂಟಾಯಿತು. ದೇವಸ್ಥಾನ, ಪೂಜೆ ಪುನಸ್ಕಾರಗಳಲ್ಲಿ ಭಕ್ತಿ ಹೆಚ್ಚಿತು. ನನ್ನ ಅಂತಃ ಪ್ರೇರಣೆಯು ನನ್ನ ಪೂರ್ವಚರ್ಯೆಯನ್ನು ಬದಲಾಯಿಸತೊಡಗಿತು.' ಹೀಗೆ ಪ್ರಾಪಂಚಿಕ ಜೀವನದಲ್ಲಿ ವೈರಾಗ್ಯವು ಋಷಿವರ್ಯರಲ್ಲಿ ಉಟ್ಟವಿಸಿತು.

ದೈವೀ ಪ್ರೇರಣೆ.

ಹೀಗೆ ಇರುತ್ತಿರಲು 1896ರಲ್ಲಿ ಮಹರ್ಷಿಗಳು ಪ್ರಾಪಂಚಿಕ ವ್ಯವಹಾರವನ್ನು ತೊರೆದು ಜಗನ್ನಿಯಾಮಕನ ಅನ್ವೇಷಣೆಗಾಗಿ ಓಡಿ ಹೋದರು. ತಿರುವಣ್ಣಾಮಲೆಯ ಅರುಣಾಚಲವಲ್ಲಿ ಅವು ನೆಲೆಸಲು ನಿಶ್ಚಯಿಸಿದರು. ಇದಕ್ಕೆ ಮೊದಲೇ ಅರುಣಾಚಲವೆಂಬ ಆ ಹೆಸರೇ ಮಹರ್ಷಿಗಳಲ್ಲಿ ಒಂದು ಆಕರ್ಷಣೆಯನ್ನು ಪಡೆದಿತ್ತು. ಮನೆಯಿಂದ ಹೊರಡುವಾಗ ತನ್ನ ಸಹೋದರನ ಅರುವಿಕೆ ಬಗ್ಗೆ ಅವರು ಬರೆದಿಟ್ಟ ಕೆಲವು ಅಂಶಗಳು, ಬೆಸಿಲಿನ ತಾಪದಿಂದ ಒಣಗಿದ್ದ ಭೂಮಿಯ ಮೇಲೆ ಘೋರ ಮಳೆ ಬಿದ್ದು ಯಾವ ರೀತಿ ಕ್ಷಣಾರ್ಧದಲ್ಲಿ ತೊಯಿದು ಹೋಗುವದೋ ಆ ರೀತಿ ಮಹರ್ಷಿಗಳ ಹೃದಯವು ಭಗವಂತನ ಕರೆಯೆಂಬ ಮಳೆಯಿಂದ ತೊಯಿದು ಪಾವನವಾದದ್ದನ್ನು ತೋರಿಸುವವು. ಆದು ಹೀಗಿದೆ–'ನನ್ನ ತಂದೆಯ ಕರೆಯಂತೆ ನಾನು ಈ ಸ್ಥಳವನ್ನು ಬಿಟ್ಟಿರುವೆನು. ಒಳ್ಳೇ ಧ್ಯೇಯದಿಂದ ನಾನು ಈ ಸ್ಥಳ ಬಿಡುವವನಿದ್ದೇನೆ. ಆದ್ದರಿಂದ ಯಾರೂ ನನ್ನ ವಿಚಾರ ಖೇದಪಡಬಾರದು. ನನ್ನನ್ನು ಹುಡುಕುವ ಹವ್ಯಾಸಕ್ಕೂ ಕೈಯಿಕ್ಕಬಾರದು.' ಹೀಗೆ ಚರಾಚರ ವಸ್ತುಗಳಿಗೂ ತಂದೆಯಾದ ಪರಮಾತ್ಮನ ಕರೆಯಂತೆ ರಮಣ ಮಹರ್ಷಿಗಳು 1896ನೇ ಸೆಪ್ಟೆಂಬರ್ 1ನೇ ತಾರೀಕಿನ ದಿನ ಅರುಣಾಚಲ ದೇವನ ಸ್ಥಾನವನ್ನು ಸೇರಿದರು.

ನಂತರದ ಮಹರ್ಷಿಗಳ ಜೀವನ ಕಥೆಯನ್ನು ದೈವೀ ಲೀಲೆಯೆಂದೇ ಹೇಳಬಹುದು. ಅವರು ದೇವಾಲಯವಲ್ಲಿರುವಾಗಲೆಲ್ಲಾ ಸಮಾಧಿಯಲ್ಲಿರುತ್ತಾರೆ. ಸಂಚಾರ ಮಾಡುತ್ತಿರುವಾಗಲೂ ಅವರು ಮೌನವ್ರತಧಾರಿಗಳಿರುತ್ತಾರೆ. ಎರಡುವರೆ ವರ್ಷಗಳಂತರ ಮಹರ್ಷಿಗಳ ತಾಯಿಯು ಅವರನ್ನು ಪುನಹ ಹಿಂದಕ್ಕೆ ಕರೆಸುವ ಪ್ರಯತ್ನ ಮಾಡಿದರು. ಆವರೆ ಸತ್ಯಾನ್ವೇಷಣೆಯಲ್ಲಿ ಮೈಮರೆತಿರುವ ಋಷಿವರ್ಯರು ಈ ಪ್ರಾಪಂಚಿಕ ವ್ಯವಹಾರಕ್ಕೆ ಹೇಗೆ ಹಿಂತಿರುಗಿಯಾರು? ಮಾತೆಯ ಪ್ರಯತ್ನವು ನಿಷ್ಫಲವಾಯಿತು. ಮಹರ್ಷಿಗಳು ಅರುಣಾಚಲ ಪರ್ವತದ ಮೇಲೇರಿ ಇಪ್ಪತ್ತು ವರ್ಷಗಳ ವರೆಗೆ ಗುಹೆಯಲ್ಲಿ ವಾಸ ಮಾಡಿದರು. ಮಹರ್ಷಿಗಳ ಶಿಷ್ಯವೃಂದದಲ್ಲಿ ಅನೇಕರು ಅದ್ವೈತ ಮತಾವಲಂಬಿಗಳಿರುವರು. ಅದ್ವೈತ ಮತವ ಕಾಠಿಣ್ಯವನ್ನು ಬಗೆಹರಿಸಿಕೊಳ್ಳಲು ಮಹರ್ಷಿಯವರ ಮೊರೆಹೊಕ್ಕವರಿರುವರು. ಮಹರ್ಷಿಗಳು ಇಂದು ತನ್ನ ಶಿಷ್ಯವೃಂದಕ್ಕೆ ಕೊಡುತ್ತಿರುವ ಉಪದೇಶವು ಪೌರಾಣಿಕವಾದ್ದಲ್ಲ. ಕೇವಲ ದೈನಿಕ ವ್ಯವಹಾರದ್ದು. 'ಪರಮಾತ್ಮ ಸಾಕ್ಷಾತ್ಕಾರಕ್ಕೆ ಆ ಮತ, ಈ ಮತವೆಂದುಹುಡುಕಾಡುವದು ಹುಚ್ಚುತನ. ಈ ಮತಗಳು ನಮ್ಮನ್ನು ಎಲ್ಲಾ ಮತಗಳು ತಲಪುವ ಒಂದು ಸ್ಥಾನಕ್ಕೆ ದಾರಿ ತೋರಿಸುವವು ಮಾತ್ರ. ಅದರಿಂದಾಚೆಗೆ ಅವು ನಮ್ಮನ್ನು ಮುನ್ನಡೆಸಲಾರವು. ನಮಗೆ ಬೇಕಾಗಿರುವದು ಆತ್ಮ ಸಾಕ್ಷಾತ್ಕಾರ. ಈ ಸಾಕ್ಷಾತ್ಕಾರವು ಮಹಾಕಠಿಣ ಮಂತ್ರವಲ್ಲ. ಇಲ್ಲವೇ ಯಾರಿಗೂ ನಿಲುಕದೆ ಅಡಗಿರುವ ಅಮೂಲ್ಯ ವಸ್ತುವಲ್ಲ. ದೇವರೇ ಎಲ್ಲವೂ, ಎಲ್ಲವೂ ದೇವರೆ ಎಂಬ ಆ ತತ್ವವನ್ನು ನಮ್ಮ ದಿನಚರ್ಯೆಯಲ್ಲಿ ತರುವದೇ ಮುಕ್ತಿ' ಎಂಬುದೇ ಅವರ ಉಪದೇಶ.

ಮಹರ್ಷಿಗಳ ಸಂದೇಶ.

ಅನೇಕಾನೇಕ ತತ್ವಶಾಸ್ತ್ರವೇತ್ತರು ಮಹರ್ಷಿಗಳಲ್ಲಿಗೆ ಬಂದು ಅವರ ಮಹಿಮಾತಿಶಯದಿಂದ ಪುರುಳಾಗಿರುವರು. ಅವರ ಸಂದೇಶಗಳನ್ನು ಪಡೆದು ಪಾವನರಾಗಿರುವರು. ಮಹರ್ಷಿಗಳ 'ರಮಣ ಗೀತೆ' ಅವರ ಸಂದೇಶವನ್ನು ಸಾರುತ್ತಿದೆ. 'ಈ ನಾನು ಎಂಬದು ಎಲ್ಲಿಂದ ಉಪಸ್ಥಿತವಾಗಿದೆಯೆಂದು ಯೋಚಿಸುತ್ತಾ ನಡೆದರೆ ಮನವು ಅಲ್ಲೇ ತಲ್ಲೀನವನವಾಗುವುದು. ಅದೇ ತಪಸ್ಸು. ಸೂರ್ಯನ ಪ್ರಭೆ ಇರುವಲ್ಲಿ ಚಂದ್ರನು ಹೇಗೆ ಕಾಣಿಸನೋ ತದ್ರೂಪ ರೀತಿ ಹೃದಯವು ಪರಿಪಕ್ವನಾದಾಗ ಈ ಮವಸಿನ ವಿಕಾರಗಳು ಮುನ್ನಡೆಯವು' ಎಂದು ಸಾರಿರುವರು. ಮಹರ್ಷಿಗಳ ದರ್ಶನ, ಸ್ಪರ್ಶನ ಇವೇ ಮಾನವನನ್ನು ಪಾಪವಿಮುಕ್ತನನ್ನಾಗಿ ಮಾಡುವದೆಂಬುವುದರಲ್ಲಿ ಲವಲೇಶ ಸಂಶಯವಿಲ್ಲ.

ಕಾಲವು ಕ್ರಮಿಸಿದಂತೆ ಮಹರ್ಷಿಗಳ ತಾಯಿಯವರಿಗೆ ಸಂಸಾರ ತಾಪತ್ರಯ ಹೆಚ್ಚಾಯಿತು. 1916ರಲ್ಲಿ ಆಕೆಯು ಮನಸಿಗೆ ಶಾಂತಿ ದೊರೆಯುವುದಾದರೆ ಅದು ರಮಣಾಶ್ರಮದಲ್ಲಿಯೇ ಎಂದು ತಿಳಿದು ಅಲ್ಲಿಗೆ ಬಂದು ಸೇರಿದರು. ರಮಣ ಋಷಿವರ್ಯರ ಸಹೋದರನೂ ಬಂದು ಆಶ್ರಮವಾಸಿಯಾದನು. ಋಷಿಗಳ ಮಾತೆಯವರು 1922ರಲ್ಲಿ ಪರಂಧಾಮವನ್ನೈದಿದರು. ಅವರ ಜ್ಞಾಪಕಾರ್ಥವಾಗಿ ಅಲ್ಲಿ 'ಮಾತೃಭೂತೇಶ್ವರ' ಎಂಬ ದೇವಾಲಯವನ್ನು ಕಟ್ಟಿಸಿದ್ದಾರೆ. ಅಲ್ಲಿ ಲಕ್ಷೋಪಲಕ್ಷ ಬಡ ಜನರಿಗೆ ನಿಧನ ದಿನಾಚರಣೆಯಲ್ಲಿ ಅನ್ನ ಸಂತರ್ಪಣೆ ನಡೆಯುತ್ತದೆ.

ರಮಣಾಶ್ರಮ.

ಇಂದಿನ ಜಗತ್ತಿನ ಅವ್ಯವಸ್ಥೆಯು ಹಾಗೂ ಪೈಶಾಚಿಕ ಕೃತ್ಯಗಳಿಂದ ನೊಂದು ಬೆಂದ ಹೃದಯದವರಿಗೆ ಶಾಂತಿ ನಿವಾಸವಾದ ರಮಣಾಶ್ರಮದ ವರ್ಣನೆಯು ಉಪಕಾರಿಯಾಗಬಹುದು. ರಮಣಾಶ್ರಮವು ತಿರುವಣ್ಣಾಮಲೆ ನಗರದಿಂದ ಒಂದು ಮೈಲು ದೂರದಲ್ಲಿ ಅರುಣಾಚಲ ಬೆಟ್ಟದ ಕೆಳಗಡೆಯಲ್ಲಿ ಕಟ್ಟಲ್ಪಟ್ಟಿದೆ. ಆಶ್ರಮಕ್ಕೆ ಹೋಗಲು ಯಾವ ತೊಡಕು ತೊಂದರೆಗಳೂ ಇಲ್ಲ. ಪ್ರೇಕ್ಷಕರಿಗೆ ಭೇಟಿ ಕೊಡುವ ವಿಶಾಲ ಕೋಣೆಯಲ್ಲಿ ಮಹರ್ಷಿಗಳು ಸಮಾಧಿ ಗ್ರಸ್ಥರಾಗಿ ಮಂಡಿಸಿರುತ್ತಾರೆ. ಅಲ್ಲಿ ರಾಜನಾಗಲೀ, ಬೀದಿಯ ಭಿಕ್ಷಾರಿಯಾಗಲೀ, ವೇದ ಶಾಸ್ತ್ರ ಪಾಂಡಿತ್ಯ ಪಾರಂಗತನಾಗಲೀ ಯಾ ನಿರಕ್ಷರ ಕುಕ್ಷಿಯಾಗಲೀ ಎಲ್ಲರಿಗೂ ಒಂದೇ ಸ್ಥಳ. ಒಂದೇ ಉಪಚಾರ, ಒಂದೇ ಬೋಧನೆ, ಚಿಕ್ಕ ಮಕ್ಕಳೆಂದರೆ ಮಹರ್ಷಿಗಳಿಗೆ ಅತ್ಯಾನಂದ, ಸಂಸಾರ ಸಾಗರದ ಭೀಕರ ಮೂರುತಕ್ಕೆ ಬಲಿಯಾಗಿ ತತ್ತರಿಸುತ್ತಿರುವ ಮಾನವ ಕೋಟಿಗೆ ಶಾಂತಿಯನ್ನು ಕೊಟ್ಟು ಹೃದಯದಲ್ಲಿ ಆಹ್ಲಾದವನ್ನು ಹುಟ್ಟಿಸುವ ಆ ಶ್ರೀ ಭಗವಾನ್ ರಮಣ ಮಹರ್ಷಿಗಳ ದರ್ಶನವು ಪರಮ ಪಾವನವಾದುದು.

'ಭವಬಂಧನದಲ್ಲಿ ಮುಳುಗಿರುವನಿಗೆ ಜ್ಞಾನವೆಂಬ ಆಹಾರವನ್ನು ಕೊಟ್ಟು ಉದ್ಧರಿಸುವೆ. ಓ ರಮಣ ದೇವಾ! ಆ ದೇವರ ಸಾನಿಧ್ಯವೆಂಬ ಆಹಾರವನ್ನು ಭುಂಜಿಸಿ ಕೃತಾರ್ಥನಾಗಿರುವೆ. ಓ ರಮಣ ದೇವಾ.'

ನೋಟೀಸು.

ಈ ಕೆಳಗಿನ ಶೆಡ್ಯೂಲ್‌ನಲ್ಲಿ ತೋರಿಸಿರುವ ಆಸ್ತಿಗಳನ್ನು ಫ್ರೇಜರ್‌ಪೇಟೆಯಲ್ಲಿರುವ ನಂಜಪ್ಪಶೆಟ್ಟರ ಮಗ ಪದ್ಮಯ್ಯ ಶೆಟ್ಟಿಯು ಕ್ರಯಕ್ಕೆ ಪಡಕೊಂಡು ಅವರ ಬಾವ ಸುಬ್ರಾಯಶೆಟ್ಟರ ಹೆಸರಿಗೆ ಬಿನಾಮಿ ಸಾಧನ ಮಾಡಿಸಿದ್ದಾಗಿದೆ. ಸದರಿ ಸುಬ್ರಾಯ ಶೆಟ್ಟರಿಗೆ ಆಸ್ತಿಗಳಲ್ಲಿ ಯಾವುದೊಂದು ಹಕ್ಕೂ ಇಲ್ಲ. ಅದ್ದರಿಂದ ಯಾರಾದರೂ ಸದರಿ ಆಸ್ತಿಗಳನ್ನು ಕ್ರಯಕ್ಕೆ ಬರಸಿಕೊಂಡಲ್ಲು ಅಂಥವರಿಗೆ ಯಾವುದೊಂದು ಹಕ್ಕೂ ಸಿಕ್ಕಲಾರದು ಎಂಬಸಂಗತಿ ಸಮಸ್ತರಿಗೂ ಈ ಮೂಲಕ ತಿಳಿಸಿದೆ.

ಶೆಡ್ಯೂಲ್.

ಫ್ರೇಜರ್‌ಪೇಟೆ ಹೋಬಳಿ ರಂಗಸಮುದ್ರ ಗ್ರಾಮದಲ್ಲಿ ಪದ್ಮಯ್ಯ ಶೆಟ್ಟರ ಅನುಭವ ಸ್ವಾಧೀನದಲ್ಲಿರುವ ಸ. ನಂ. 18/2ರ 3.50, ಸ. ನಂ. 18/3ರ 1.80, ಸ. ನಂ. 17ರ 0.24, ಸ. ನಂ. 16ರ 0.59, ಸ. ನಂ. 18/5ರ 1.80 ಗದ್ದೆಗಳು. ಸ. ನಂ. 20/2ರ 1.71, ಸ. ನಂ. 20/1ರ 1.71 ಹೊಲಗಳು.

ಸಿ. ಯನ್. ಪದ್ಮಯ್ಯ ಶೆಟ್ಟಿ.

ತಾ. 13-12-39. 3-3

ಲ್ಲ ಮಾಯವಾಗಿವೆ. ವ್ಯಾಪಾರ ವೈಗಾರಿಕೆಗಳು ಹಿಂಸೆ ಮತ್ತು ಮೋಸಗಳಿಂದ ಇನ್ನೂ ಪಾರಾಗಿಲ್ಲ ನಿಜ, ಆದರೆ ವ್ಯಾಪಾರದ ಹಿಂದಿನ ಅವಸ್ಥೆಗೂ ಇಂದಿನ ಸ್ಥಿತಿಗೂ ಅಗಾಧ ವ್ಯತ್ಯಾಸವಿದೆ. ಇಂದು ವ್ಯಾಪಾರದಲ್ಲಿ ನಂಬಿಕೆ, ನಿಶ್ಚಿತ ಕ್ರಯ ಇವು ಅಭಿವೃದ್ಧಿಗೊಳ್ಳುತ್ತಿವೆ. ಆದರೂ ಅನೇಕ ರೀತಿಯ ಹಿಂಸೆಗಳು ನಡೆಯುತ್ತಲೇ ಇವೆ. ಕ್ರಮೇಣ ಮಾನವನ ಮನಸ್ಸು ಈ ಕಪಟ ತೊಂದರೆಗಳಿಂದ ಪಾರಾಗಲು ಹಂಬಲಿಸಿದ್ದು ಕಂಡು ಬರುತ್ತದೆ.

[ಸಶೇಷ.

ಕೊಡಗಿನ ಭವಿಷ್ಯ.

"ವಿಶ್ವಕರ್ಣಾಟಕದ ವಿಡಂಬನೆ"

ಲೇಖಕ:—ಗುಪ್ತ, ಮಡಿಕೇರಿ.

'ಕೊಡಗು' ಪತ್ರಿಕೆಯ ತಾರೀಕು 17-11-39ರ ಸಂಚಿಕೆಯಲ್ಲಿ ಮೇಲ್ಕಂಡ ಶಿರೋನಾಮದಿಂದ ನಾನು ಬರೆದ ಲೇಖನಕ್ಕೆ ತಾರೀಕು 17-12-39ರ ವಿಶ್ವಕರ್ಣಾಟಕ ಪತ್ರಿಕೆಯ ಸಂಚಿಕೆಯಲ್ಲಿ ಸಂಪಾದಕರು 'ಆಕ್ಷೇಪಣೆಗೆ ಸಮಾಧಾನ' ವೆಂದು ಕೆಲವು ಸೂಚನೆಗಳನ್ನು ಮುಂದಿಟ್ಟಿರುವದು ಕಂಡು ಬರುತ್ತೆ. ಅದನ್ನು ನೋಡುವಾಗ ತಾ. 22ರ 'ಕೊಡಗು' ಪತ್ರಿಕೆಯಲ್ಲಿ 'ಸ್ವತಂತ್ರ ಪ್ರಿಯ' ರೆಂಬವರು 'ತಾಯಿ ನಾಡು' ಪತ್ರಿಕೆಯ ಸಂಪಾದಕರಿಗೆ ಮೂರುತ್ತರವಿತ್ತಿರುವ ಲೇಖನದಲ್ಲಿಯ 'ಮೈಸೂರಿನವರ ನೂತನ ಮಲ್ಲತನ'ವೆಂಬ ವಾಕ್ಯ ನೆನಪಿಗೆ ಬರುತ್ತದೆ. ಸಂಪಾದಕರು ನನ್ನ ಲೇಖನದ ವಿಚಾರಗಳನ್ನು ತಮ್ಮ ಭಾಷಾ ಶೈಲಿಯ ವೈಖರಿಯಲ್ಲಿ ಮುಚ್ಚಲು ಪ್ರಯತ್ನಿಸಿದ್ದು ಕಂಡು ಬರುತ್ತದೆ. ಮೈಸೂರಿನಲ್ಲಿ ದಬ್ಬಾಳಿಕೆಯ ರಾಜ್ಯಭಾರ ನಡೆಯುತ್ತಿದೆಯೆಂಬುದು ಮೈಸೂರಿಗೆ ಕೊಡಗು ಸೇರಬಾರದೆಂಬುದಕ್ಕೆ ಕಾರಣವಲ್ಲವಂತೆ! ಕೊಡಗಿನ ಹಳ್ಳಿಗಳು ಮೈಸೂರಿನವಕ್ಕಿಂತ ಉತ್ತಮ ಸ್ಥಿತಿಯಲ್ಲಿರುವದೂ, ಆರ್ಥಿಕ ಮುಗ್ಗಟ್ಟಿನಲ್ಲಿರುವ ಕೊಡಗನ್ನು ಮೈಸೂರು ಉದಾಸೀನ ಭಾವದಿಂದ ಕಾಣಬಹುದೆಂಬುವುದೂ ವಿಶೇಷ ಸಬಬುಗಳಲ್ಲವಂತೆ! ಇರಲಿ, ಸಂಪಾದಕರಿಗೆ ಈ ವಿಚಾರ ಸ್ವಲ್ಪ ವಿವರಣೆಯನ್ನು ಕೊಟ್ಟು ನನ್ನ ಕೆಲವು ಸಂದೇಹಗಳನ್ನು ಅವರ ಮುಂದಿಡಬಯಸುತ್ತೇನೆ.

'ಮೈಸೂರಿನ ರಾಜಕೀಯ ಪರಿಸ್ಥಿತಿ ತತ್ಕಾಲ ವ್ಯಾಪಾರವು! ಇದರಿಂದ ಮೈಸೂರಿನ ಭವಿಷ್ಯದ ನಿರ್ಣಯ ಮಾಡಕೂಮು' ಸಂಪಾದಕರು ತಮ್ಮ ಈ ಉದ್ಗಾರದಲ್ಲಿ ಸ್ವಲ್ಪ ತಪ್ಪು ಮಾರ್ಗದಲ್ಲಿ ಕ್ರಮಿಸಿದಂತೆ ಕಂಡುಬರುತ್ತದೆ. ರಾಜಕೀಯ ಪರಿಸ್ಥಿತಿ ತತ್ಕಾಲಿಕವೆಂಬುದು ಸ್ವಲ್ಪ ಆಶ್ಚರ್ಯಹುಟ್ಟಿಸುವ ವಿಚಾರವೇ. ಮೈಸೂರಿನ ರಾಜಕೀಯ ಆಂದೋಲನವು ಪ್ರಾರಂಭವಾಗಿ ವರ್ಷಗಳು ಕಳೆಯುತ್ತಾ ನಡೆದಿವೆ. ಈ ಅವಧಿಯಲ್ಲಿ ಮುಂದುವರಿದ ನಾಡೆಂಬ ಸೋಗಿನಲ್ಲಿರುವ ಮೂದರಿ ಮೈಸೂರು 'ವಿದುರಾಶ್ವಥ' ಮೊದಲಾದ ಘಟನೆಗಳಲ್ಲಿ ತನ್ನ ಕರಾಳ ಸ್ವರೂಪವನ್ನು ತೋರಿಸಿ ರಾಜಕೀಯ ಪರಿಸ್ಥಿತಿ ಬೇಗ ತೀರ್ಮಾನವಾಗುವದೇ ಎಂಬದನ್ನು ತೋರಿಸಿ ಕೊಟ್ಟಿದೆ. ಮೇಲಾಗಿ ಇಂದು ಸಂಸ್ಥಾನಗಳ ಏನಾಯಕತ್ವದ ಆಡಳಿತವು ಕೊನೆಗೊಳ್ಳದ ವಿನಹ ರಾಜಕೀಯ ರಂಗದಲ್ಲಿ ಶಾಂತತೆಯು ನೆಲೆಗೊಳ್ಳಲಾರದೆಂದು ರಾಜಕೀಯ ರಂಗದ ಮಹಾ ಮಹಾ ಪ್ರಭೃತಿಗಳು ಸಾರಿದ್ದಾರೆ. ಅಂಥಾದ್ದರಲ್ಲಿ ಮೈಸೂರಿನ ರಾಜಕೀಯ ಪರಿಸ್ಥಿತಿ 'ತತ್ಕಾಲಿಕ' ಹೇಗೆ ಎಂಬುದು ಮನಸಿಗೆ ಹತ್ತದ ವಿಚಾರ.

'ಮೈಸೂರು ಮಹಾರಾಜರವರ ಮನೋರಥವು ಪೂರ್ಣ ಪ್ರಜಾ ಹಿತ ಸಾಧನೆಯೇ ಆಂತೆ. ಪ್ರಜೆಗಳಿಗೆ ರಾಜಕೀಯ ಅಧಿಕಾರವನ್ನು ಕೊಡಬೇಕೆನ್ನುವದೇ ಅವರ ಮಹತ್ವ ಕಾಂಕ್ಷೆಯಂತೆ. ಆದರೆ 'ಯಾವಾಗ' ಎಂಬ ಪ್ರಶ್ನೆಯೇ ಬಗೆಹರಿಯದೆ ನಿಂತಿರುವ ತೊಡಕಂತೆ' ಪ್ರಜಾಹಿತ ಸಾಧಕರಾದವರಿಗೆ ತನ್ನ ಪ್ರಜೆಗಳಿಗೆ ಪ್ರಜಾ ಜವಾಬ್ದಾರಿಯನ್ನು ಕೊಡಲು ತೊಡಕಾವದು? ದಿನ, ನಕ್ಷತ್ರ ಸರಿ ಸಿಕ್ಕದ್ದೇ ಇರಬಹುದಲ್ಲವೇ? ಆಸ್ಥಾನದಲ್ಲಿ ಪ್ರಸಿದ್ಧ ಜ್ಯೋತಿಷ್ಯರನ್ನಿಟ್ಟುಕೊಂಡಿರುವ ರಾಜರಿಗೇ ಈ ಸಮಸ್ಯೆ ತೊಡಕಾವಶ್ಟು ಸುಲಭ ಯೂರಿಗೋ ತಿಳಿಯದು. ಈ ಕಾರಣವನ್ನು ಬಿಟ್ಟು ಸ್ವಲ್ಪ ಆಳವಾಗಿ ಆಲೋಚಿಸಿದರೆ ನನ್ನ ದೃಷ್ಟಿಗೆ ಒಂದು ವಿಚಾರ ಹೊಳೆಯತ್ತದೆ. ಸಂಪಾದಕರ ಉದ್ಗಾರದಂತೆ ಮಹಾರಾಜರವರು ಪ್ರಜಾಹಿತಚಿಂತಕರೆಂಬುವುದರಲ್ಲಿ ಸಂಶೇಹವಿಲ್ಲ. ಆದರೆ ಇಂಥಾ ಪ್ರಜಾ ಪೋಷಕರ ನಾಡಿನಲ್ಲಿ ಪ್ರಜೆಗಳ ಮೇಲೆ ಗುಂಡು ಹಾರಿಸಿ ಪ್ರಜಾ ಕೇಳಿಕೆಯನ್ನು ಬಗ್ಗುಬಡಿಯಬೇಕಾದರೆ ಈ ಪ್ರಜಾನುರಾಗಿ ಅರಸರ ಹತೋಟಿಯಲ್ಲಿರದ ಒಂದು ಶಕ್ತಿ ಇದೆಯೆಂದು ಗೊತ್ತಾಗದೇ? ರಾಜಕೀಯಾಧಿಕಾರಗಳನ್ನು ಕೊಡಲು ರಾಜರು ಸಿದ್ಧರಿದ್ದರೂ ದಿನ, ನಕ್ಷತ್ರಗಳು ಸರಿಬೀಳದಿರಲು ಕಾರಣಬೇರಿರಲಿಕ್ಕಿಲ್ಲವೇ? ಆಳರಸರ ಮೇಲೆ ತನ್ನ ಭದ್ರಮುಷ್ಟಿಯನ್ನಿಟ್ಟು ಅವರನ್ನು ಕೇವಲ ಕೈಗೊಂಬೆಗಳನ್ನಾಗಿ ಮಾಡಿಕೊಂಡು ವಿರಾಜಿಸುತ್ತಿರುವ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕುಟಿಲ ನೀತಿಯೇ ಇದಾಗಿರಬಹುದಲ್ಲವೇ? ಪರಿಸ್ಥಿತಿ ಇಂಥಾದ್ದಿರುವಾಗ ಆಳರಸರ ಮೇಲೆ ಕೈವಾಡ ನಡಿಸುತ್ತಿರುವ ಬ್ರಿಟಿಷರು ಪ್ರಜಾ ಸರ್ಕಾರವನ್ನು ಸ್ಥಾಪಿಸುವ ನಿರ್ಧಾರ ಮಾಡಿದ್ದಲ್ಲದೆ, ಈ ಆಳರಸರ ಕನವರಿಕೆಯು ಗಾಳಿ ಗೋಪುರದಂತಲ್ಲವೇ? ಹೀಗಿರಲು ಮೈಸೂರಿನ ರಾಜಕೀಯ ಪರಿಸ್ಥಿತಿ ಕೇವಲ ತತ್ಕಾಲಿಕ ವ್ಯಾಪಾರವೆಂಬ ಸಂಪಾದಕರ ಸೋಗು ಸಂಶಯಕ್ಕೆಡೆ ಕೊಡುವುದಲ್ಲವೇ?

'ಕೊಡಗಿನ ಆರ್ಥಿಕ ಸ್ಥಿತಿ ಅಸಮರ್ಪಕವಾಗಿದೆ. ಮೈಸೂರಿನ ಆರ್ಥಿಕತಳಹದಿ ಭದ್ರವಿದೆ. ಇನ್ನು ಮೈಸೂರಿನ ಸಾಂಪತ್ತಿಕ ಸ್ಥಿತಿ ಸುಧಾರಿಸಿಕೊಳ್ಳುವ ಚಿಹ್ನೆಗಳಿರುವ ಪ್ರಯುಕ್ತ ಇಂದಿನ ಭದ್ರತಳಹದಿಯು ಮೇಲಿ ಮಹಾ ಗೋಪುರ ಕಟ್ಟುವದು ಮೈಸೂರಿಗೆ ಸುಲಭ ಸಾಧ್ಯವಿದೆ. ಇಂಥಾ ಸುಭದ್ರವಾಗಿರುವ ಮೈಸೂರಿನೊಡನೆ ಕೊಡಗು ಸೇರಿಕೊಂಡರೆ ಧನಿಕನ ಆಶ್ರಯವನ್ನು ಪಡೆದ ಬಡವನು ಜೀವನ ಹೊರೆಯಿಕೊಳ್ಳುವ ರೀತಿ ಕೊಡಗು ಬದುಕಿ ಬಾಳಬಹುದು. ಕೊಡಕಿನ ಶಿಕ್ಷಣ ವ್ಯವಸ್ಥೆ, ಸಾಂಪತ್ತಿಕ ಸ್ಥಿತಿ, ಸಾಂಸ್ಕೃತಿಕ ಲಾಭ ಇವೆಲ್ಲಾ ಆಗುವದು. ಆವುದರಿಂದ ಮೈಸೂರಿಗೆ ಸೇರುವದೇ ಕೊಡಗಿನ ಪ್ರಗತಿಗೆ ಹೆದ್ದಾರಿ'ಯೆಂಬುವುದು ಸಂಪಾದಕರ ಲೇಖನದ ಅರ್ಥ. ಇವರ ಈ ನಯ ನುಡಿಗಳು ನನ್ನ ಮನವನ್ನೂ ಆಕರ್ಷಿಸಿವೆ. ಆದರೆ ತಾ. 22ರ 'ಕೊಡಗು' ಪತ್ರಿಕೆಯಲ್ಲಿ ಬರೆವ ಸ್ವಾತಂತ್ರ್ಯ ಪ್ರಿಯರ ಲೇಖನವು 'ವೇಶ್ಯೆಯರ ಶಯ್ಯಾಗ್ರಹವಂತಿರುವ ಮೈಸೂರಿಗೆ ಮನ ಮಾಡಿಕೊಳ್ಳದಿರಿ. ಎಚ್ಚರಿಕೆ! ಎಚ್ಚರಿಕೆ!' ಎಂದು ಬಡಿಬಿಸುತ್ತಿದೆ. ಆದ್ದರಿಂದ ಮನದಲ್ಲಿ ವಿಚಾರ ತರಂಗಗಳು ಎದ್ದಿವೆ. ಈ ವಿಚಾರ ಸರಣಿಯಲ್ಲಿ ಸೋಗಿನ ಮೈಸೂರಿನ ಛಿದ್ರಗಳಾದರೂ ಒಂದೊಂದು ಎದ್ದು ಕಾಣುತ್ತಿವೆ. ಮೈಸೂರಿನ ಆರ್ಥಿಕ ಅಡಿಗಲ್ಲು ಆಲ್ಲಾಡುತ್ತಿರುವದು ಗೋಚರವಾಗುತ್ತಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಕೊಡಗು ಮೈಸೂರಿಗಿಂತ ಮುಂದಿವೆಯೆಂಬುದು ಎಲ್ಲರಿಗೂ ವಿದಿತವಿದ್ದರೂ ಹಿಂದಿರುವ ಮೈಸೂರಿನೊಡನೆ ಸೇರಿದರೆ ಕೊಡಗು ಇನ್ನೂ ಮುಂದರಿಯಬಹುದೆಂಬ ಸಂಪಾದಕರ ಸಿದ್ಧಾಂತವು ಇನ್ನೂ ಸಂಶಯಕ್ಕೀಡು ಮಾಡುತ್ತಿದೆ. ಸಾಂಸ್ಕೃತಿಕ ಮತ್ತು ಸಾಂಪತ್ತಿಕ ವಿಚಾರದಲ್ಲಿ ಎಂದೂ ಕೊಡಗಿಗಿಂತ ಮೇಲ್ತರಗತಿಯಲ್ಲಿಲ್ಲದ ಮೈಸೂರಿನವರ ಆಹ್ವಾನವು ಇನ್ನೂ ಅವರ ಸವಿ ಮಾತಿನ ಟೊಳ್ಳುತನವನ್ನು ಬಯಲಪಡಿಸುತ್ತಿದೆ. ಈ ಮಧ್ಯೆ ಸುಮ್ಮನೆ ಜನರನ್ನು ಮರಳುಗೊಳಿಸುವ ಒಣ ಜಂಭವನ್ನು ಕೊಚ್ಚಿಕೊಂಡು, ಕೊಡಗನ್ನು ತಮ್ಮ ಬಗಲಲ್ಲಿ ಸೇರಿಸಿಕೊಂಡು ಅದರ ಅವಶ್ಯಕಗಳನ್ನು ತಮ್ಮ ಕೈಯಿಂದ ಪೂರೈಸಿಕೊಂಡು ನಷ್ಟ ಮಾಡಿಕೊಳ್ಳುವ ಹಣೇ ಬರಹವಾದರೂ ಈ ಮೈಸೂರಿನವರಿಗೇಕೇ? ಇದೂ ತಿಳಿಯದ ವಿಚಾರ. ಮೈಸೂರಿನವರ ಈ ಹಂಬಲದ ಪುರುಷಾರ್ಥವಾದರೂ ಏನಿದೆ ಎಂಬುವುದು ಸಂಪಾದಕರಿಂದಲೇ ಖಚಿತವಾಗಬೇಕು. ಇಂದಿನ ಸ್ವಾರ್ಥಿ ಜಗತ್ತಿನಲ್ಲಿ ಮೈಸೂರಿನವರಂಥಾ ನಿಸ್ವಾರ್ಥಿಗಳಿರುವರೆಂದರೆ ಭಾರತಕ್ಕೇ ಅದು ಹೆಮ್ಮೆಯ ವಿಚಾರವಲ್ಲವೇ? ಕೊಡಗಿನ ಮೇಲೆ ಮೈಸೂರಿನವರು ತೋರಿಸುವ ಆ ಪ್ರೇಮವನ್ನು ನೋಡುವಾಗ 'ಧೃತರಾಷ್ಟ್ರ ಪ್ರೇಮ' ವೆಂಬ ಶಬ್ದದ ಯೋಜನೆ ಬರುತ್ತದೆ.

ಕೊಡಗಿನವನಾಗಿ ಕೊಡಗಿನ ಹಿತ ದೃಷ್ಟಿಯಿಂದ ಹೇಳುವದಾದರೆ ಎಲ್ಲಾ ವಿಧದಲ್ಲಿಯೂ ಉತ್ತಮ ಸ್ಥಿತಿಯಲ್ಲಿರುವ ಕೊಡಗು ಮೈಸೂರಿಗೆ ಸೇರಲು ಅವೋಘವಾದ ಪುರುಷಾರ್ಥವಾದರೂ ಬೇಡವೇ? ನನ್ನ ದೃಷ್ಟಿಯಲ್ಲಿ ರಾಜಕೀಯ ವಿಚಾರದಲ್ಲಾಗಲೀ, ಸಾಂಪತ್ತಿಕ ನೀತಿಯಿಂದಾಗಲೀ, ಯಾ ಸಾಂಸ್ಕೃತಿಕ ಸಮಾಲೋಚನೆಯಿಂದಾಗಲೀ ಮೈಸೂರಿನೊಂದಿಗೆ ಸಂಯೋಜನೆಯು ಕೊಡಗಿಗೆ ಸುಖದಾಯಕವಾಗಿಲ್ಲ. ಅಂಥಾ ಸಂದರ್ಭವಿದ್ದರೆ ಸಂಪಾದಕರು ಅಂಕೆ ಸಂಖ್ಯೆಗಳನ್ನು ಕೊಟ್ಟು ವಿಶದೀಕರಿಸುವರೇ?

ಬಾ ತ್ಮ.

ಸಿನೇಮಾ ಸಂಚಾಲಕರಲ್ಲಿ ಒಂದು ಮಾತು.

ಬಡವನಾಗಲಿ, ಬಲ್ಲಿದನಾಗಲೀ ಸಾಯಂಕಾಲವಾದೊಡನೇ ಸಿನಿಮಾ ಮುಂದಿರದಿಂದ ಕೇಳಿ ಬರುವ ಸುಮಧುರವಾದ ಸಂಗೀತಕ್ಕೆ ಮನ ಸೋತು ಕಷ್ಟದಿಂದ ದುಡಿದಿಟ್ಟ ಹಣವನ್ನು ತೆಗೆದು, ಟಿಕೇಟು ಪಡೆದು ಮಂದಿರಕ್ಕೆ ನುಗ್ಗುವದು ಸ್ವಭಾವ. ಸಂಗೀತದ ಆಕರ್ಷಣೆಯಿಂದ ದುಡ್ಡು ಕಳಕೊಂಡು ಮೂರಣೆ ದಿನ ಪಶ್ಚಾತಾಪ ಪಡುವದೂ ಬಹಳ ಜನರಲ್ಲಿ ಒಂದು ರೂಢಿ. ಆದ್ದರಿಂದ ಸಿನಿಮಾ ಸಂಚಾಲಕರು ಆದಷ್ಟು ಕಮ್ಮಿ ರೀತಿಯ ದರವನ್ನಿಡುವದು ಅಗತ್ಯ. ಆದರೆ ನಮ್ಮಲ್ಲಿಯ ಪರಿಸ್ಥಿತಿ ಸ್ವಲ್ಪ ವಿಚಾರಣೀಯವಾಗಿರುವದು. ನಮ್ಮ ಸಿನಿಮಾ ಸಂಚಾಲಕರು ಮಳೆಗಾಲದ ಸಮಯದಲ್ಲಿ ಹೊರ ಪ್ರಾಂತ್ಯಗಳಲ್ಲಿ ಸಂಚರಿಸಿ ಚಿತ್ರ ಪ್ರದರ್ಶಿಸಿದಾಗ್ಯೆ ಅಲ್ಲಿ ತಮ್ಮ ಟಿಕೇಟು ದರವನ್ನು ಕಮ್ಮಿ ಇಟ್ಟದ್ದರಿಂದು ತಿಳಿದುಬರುತ್ತದೆ. ಹೆಚ್ಚೆಂದರೆ ನಾಲ್ಕಾಣೆಯ ಒಂದು ಪಾವಲಿಯಾಗಿತ್ತಂತೆ. ಆದರೆ ಅದೇ ನಮ್ಮ ಬಾಂಧವರು ತಮ್ಮ ಸ್ವದೇಶದಲ್ಲಿ ಚಿತ್ರ ಪ್ರದರ್ಶಿಸುವಾಗ ದರವನ್ನು ಏರಿಸಿದ್ದು ನೋಡಿದರೆ ವಿಷಾದದ ಸಂಗತಿ. ಇಲ್ಲಿಯಸರ ತೋರಿಕೆಯ ಪ್ರದರ್ಶನ, ದೇಶದ ಪ್ರಾಕೃತಿಕ ಲಕ್ಷಣ ಇವುಗಳಿಂದ ಸಿನಿಮಾ ಸಂಚಾಲಕರಿಗೆ ದೇಶದ ಬಡತನದ ಪರಿವೆಯಾಗಲಿಲ್ಲವೆಂದು ಕಾಣುತ್ತೆ. ಕೊಡಗಿನವರು ಧಾರಳಿಗಳೆಂಬ ಪುರಾತದ ಹೇಳಿಕೆಯನ್ನು ಮನದಲ್ಲಿಟ್ಟು ಸಂಚಾಲಕರು ಧನ ಸಂಗ್ರಹಿಸಲು ನಿಶ್ಚಯಿಸಿದಂತೆ ಕಂಡು ಬರುತ್ತದೆ. ಪ್ರಾಯಶಃ ದಿನವಹಿ ತಮ್ಮಲ್ಲಿ ಚಲ್ಲಾಟವಾಡುತ್ತಿರುವ ಹಣದ ಮಹತ್ವದಿಂದ ದೇಶದ ಕಷ್ಟವು ಸಂಚಾಲಕರಿಗೆ ಮನವರಿಕೆಯಾಗಿರಲಿಕ್ಕಿಲ್ಲ. ಆದ್ದರಿಂದಲೇ ಟಿಕೇಟಿನ ದರವನ್ನು ಏರಿಸಿರುತ್ತಾರೆ. ಇರಲಿ, ಕಷ್ಟದಲ್ಲಿ ದುಡ್ಡು ಕೊಟ್ಟು, ಜನರನ್ನು ಗಾಟದಲ್ಲಿ ಟಿಕೇಟು ಪಡೆದು ಬೆವರಿಳಿಸಿಕೊಂಡು ಮುಂದಿರದೊಳಗೆ ಪ್ರವೇಶಿಸಿದರೆ ಸಾಲದು. ಆಸನದ ಭೇಟಿಯೊಂದು ಆಲ್ಲಿ ನಡೆಯಲೇಬೇಕು. ಸಂಚಾಲಕರು ತಾವು ಮುಂದಿರದ ಮೂಲೀಕರೆಂಬ ದರ್ಪದಿಂದಲೋ, ಯಾ ತಮಗೆ ಸೀಟಿನ ತೊಂದರೆ ಬಂದೀತೆಂಬ ಯೋಚನೆಯಿಂದಲೋ ಕುರ್ಚಿಯಲ್ಲಿ ಅಲಂಕಾರವಾಗಿ ಆಸನವನ್ನು ಭದ್ರಪಡಿಸಿಕೊಂಡಿರುತ್ತಾರೆ. ಅವರ ದೃಷ್ಟಿಗೆ ಈ ಬೆವರಿಳಿಸಿಕೊಂಡು ಬಂದ ಪ್ರೇಕ್ಷಕನ ಕಷ್ಟವೆಲ್ಲಿ ಕಂಡೀತು? ಕಷ್ಟದಲ್ಲಿ ಸಂಗ್ರಹಿಸಿದ ದುಡ್ಡನ್ನು ಕೊಟ್ಟು ಅವಕ್ಕೆ ಸರಿಯಾದ ಸುಖ ಅನುಭವಿಸುವವೆಂದು ಯೋಚಿಸಿ ನಡೆದರೆ ಮುಂದಿರದೊಳಗೆ ಕೂತುಕೊಳ್ಳಲು ಜಾಗವೇ ಇಲ್ಲ. ಅಂತು ದುಡ್ಡು ಕೊಟ್ಟದಕ್ಕೆ ಇದೊಂದು ಶಿಕ್ಷೆ. ಹೀಗೆ ವಿಚಾರಿಸುತ್ತಾ ನಡೆದರೆ ಸಂಚಾಲಕರು ಯಾವುದೋ ಒಂದು ನಿರ್ದಿಷ್ಟ ಧ್ಯೇಯದಿಂದ ಕಾರ್ಯ ನಡೆಸುವಂತೆ ಕಂಡು ಬರುತ್ತದೆ. ದೇಶದ ಹಿತವಾಗಲೀ, ಯಾ ಪ್ರೇಕ್ಷಕರ ಅನುಕೂಲತೆಯಾಗಲೀ ಅವರ ಯೋಚನೆಯಲ್ಲಿಲ್ಲ. ಚುನಾವಣೆ ಕಾಲವಲ್ಲಿ ಓಟಿನ ಭೇಟಿಯ ಕಾಲಕ್ಕೆ ದೇಶ ಹಿತ ಸಾಧಿಸುವ ಧ್ಯೇಯದಿಂದ ಉಟ್ಟವಿಸಿವ 'ರೈತರ ಪಕ್ಷ'ದ ಸದಸ್ಯರೇ ಸಂಚಾಲಕರಲ್ಲಿ ಹೆಚ್ಚು ಮುಂದಿರುವರು. ಆದೇನೋ ತತ್ಕಾಲ ರೈತರ ಪಕ್ಷವು ನಿದ್ರಾಂಗನೆಯನ್ನು ಆಲಿಂಗಿಸಿದೆಯೆಂದರೆ ಆವರ ಸದಸ್ಯರು ಆ ಪಕ್ಷದ ಧ್ಯೇಯಗಳನ್ನೇ ಬಿಟ್ಟು ವರ್ತಿಸುವದು ಉಚಿತವೇ? ರೈತರ ಪಕ್ಷವೆಂಬಭಿದಾನದಿಂದದಮೆರೆದು ರೈತರಿಗೇ ಅಹಿತ ಬಗೆಯುವದು ನ್ಯಾಯವೇ? ಆದ್ದರಿಂದ ಸಿನಿಮಾ ಸಂಚಾಲಕರು ದೇಶದ ಹಿತ ದೃಷ್ಟಿಯಿಂದ ಆರ್ಥಿತ್ ತಮ್ಮ ಪಕ್ಷದ ಹಿತ ಸಾಧನೆಗಾಗಿ ಟಿಕೇಟಿನ ದರವನ್ನು ಇಳಿಸುವರಲ್ಲದೆ ಮುಂದಿರದೊಳಗಿನ ಅವ್ಯವಸ್ಥೆಯನ್ನು ಪರಿಹರಿಸಿ ಬಡ ಪ್ರೇಕ್ಷಕರಿಗೆ ಅನುಕೂಲ ಮಾಡಿಕೊಡುವರಾಗಿ ನಂಬುತ್ತೇನೆ. 'ಬಡವ'

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ ಪ್ರಕಾರ ರಿಜಿಸ್ಟರಾಗಿದೆ.)
(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	47,490	0	0
ಜಮೂಬಂದ ತೇವಣಾತಿ	–	2,27,121	4	4
ವಸೂಲಾದ ಕ್ಷೇಮನಿಧಿ	–	1,56,046	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	30,096	14	10
ತ್ರಿಪ್ಟ ಡಿಪಾಜಿಟ್ಟ	–	23,560	14	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ತೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ತೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ಕೊಡಲಾಗುತ್ತದೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-38ರಿಂದ ಹೊಂದಿಕೊಳ್ಳುವಂತೆ ಕೀಮಾನಿಸಲಾಗಿತ್ತು. ಆದರೆ ಪುನಹ ತಾ. 29-7-39ರಿಂದತತ್ಕಾಲಕ್ಕೆ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಸ್ಟ್ರಾರರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:—ಪಂ.ವ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯನವರು.
ಸೆಕ್ರೆಟರಿ:—ಮೆ. ಎಸ್. ಎನ್. ರಾಮಶೆಟ್ಟಿಯವರು.

ತಾ. 1-10-1939

ಶುಭ ಸಂದೇಶ.

ಕಂಪೆನಿಗೆ ಈ ತನಕ ತೋರಿಸಿದ ಸಹಕಾರ, ಸಹಾನುಭೂತಿಯ ಬಗ್ಗೆ ಗಿರಾಕಿ ಪ ಹಿತಚಿಂತಕರಿಗೆ ತಮ್ಮ ಸಂತೋಷ ಸೂಚನೆಯನ್ನು ಕಂಪೆನಿಯ ಸಂಚಾಲಕ ಮಂಡಳಿಯವರು ಈ ಮೂಲಕ ವ್ಯಕ್ತಪಡಿಸುತ್ತಾರೆ. ಇದೇ ರೀತಿಯಲ್ಲಿ ಹೊಸ ವರ್ಷದಲ್ಲಿಯೂ ವಿಶ್ವಾಸಪೂರ್ವಕ ಪ್ರೀತಿ ಪ್ರೋತ್ಸಾಹಗಳನ್ನು ಅಪೇಕ್ಷಿಸಿ, ಎಲ್ಲರಿಗೂ ಶಾಂತಿ ಸುಖವನ್ನು ಪಾರೈಸುವ.

Bhuvanendra Products Ltd,
Katapadi S. K.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
52-6 ಕಟಪಾಡಿ, ದ. ಕ.

ಳಿ ವರ್ಷಗಳಿಂದ ಅನುಭವದಿಟ್ಟು ಪ್ರಖ್ಯಾತಿ ಹೊಂದಿದ

ಕರ್ಪೂರಂಪ್ಯಾಸಿವ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ.
ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇವರ ಸೇವನೆಯಿಂದ ಪೂರ್ಣ ಗುಣವಾಗಿ ಜನ್ಮಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕೆಳಕ. ಮತ್ತು ಕಂಪೆನಿ,
(52-53) ಗಿರಗಾಂವ, ಮುಂಬಯಿ ೪,

ಜೀವ ವಿಮೆ ಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ.

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಆಸೋಷವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ



(ಓರಿಯಂಟಿಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

“ಓರಿಯಂಟಿಲ್”

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು.

ತಡಮಾಡದಿರಿ!

ಇಂದೇ ‘ಓರಿಯಂಟಿಲ್’ನ ಒಂದು ಪೊಲಿಸಿಯನ್ನು ಪಡೆಯಿರಿ.

ಓರಿಯಂಟಿಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್‌ಸ್ಪೆಕ್ಟರ್.
ಓರಿಯಂಟಿಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಿಲ್ ಲೈಫ್ ಆಫೀಸ್, ಓರಿಯಂಟಿಲ್ ಬಿಲ್ಡಿಂಗ್,
(52-50) ಸೌತ್ ಪೆರೇಡ್, ಬೆಂಗಳೂರು.

Printed & Published by P. I. Belliappa, at ‘Kodagu’ Press Mercara for ‘Kodagu’ Ltd.